ಶ್ರೀ



# ಶ್ರೀ ವಿದ್ಯಾಭಾಸ್ಕರ ತೀರ್ಥರು


(ಹುಣಸಿಹೊಳೆ) ಜೇಷ್ಠ ಕೃಷ್ಣ ಏಕಾದಶಿ





ಶ್ರೀಶ್ರೀವಿದ್ಯಾಭಾಸ್ಕರತೀರ್ಥರ ಪೂರ್ವಾಶ್ರಮದ
ಪೂರ್ವಜರಿಗೆ ಅರಳಿಚೆಕ್ಕಿನಲ್ಲಿ ದೊರೆತ
ದೇವರ ವಿಗ್ರಹಗಳು.

ಶ್ರೀ ರಾಯರ ಮಠದ ಶ್ರೀ ಪಾದರು
ಶ್ರೀ ವಿದ್ಯಾಭಾಸ್ಕರತೀರ್ಥರ ಪೂರ್ವಾಶ್ರಮದ
ಪೂರ್ವಜರಿಗೆ ಕೊಟ್ಟ ಶ್ರೀಪಟ್ಟಾಭಿರಾಮ ದೇವರು



ಶ್ರೀಶ್ರೀವಿದ್ಯಾಭಾಸ್ಕರತೀರ್ಥರ ಸಂಸ್ಥಾನ ಪೂಜೆ

# ಶ್ರೀ ಶ್ರೀಶ್ರೀ 1008 ಶ್ರೀವಿದ್ಯಾಭಾಸ್ಕರತೀರ್ಥ ಶ್ರೀಪಾದಂಗಳವರಚರಿತ್ರೆ

(ಕ್ರೀ.ಶ.1993–2015)

**ರಾಷ್ಟ್ರಭಾವಸಮಾಯುಕ್ತಂ ಗೋಸೇವಾನಿರತಂ ಸದಾ ।**
**ಯಾಜ್ಞವಲ್ಕ್ಯ ಮಹಾಭಕ್ತಂ ಮಠೋತ್ಕರ್ಷ ಧುರಂಧರಮ್ ॥**
**ನ್ಯಾಯಶಾಸ್ತ್ರವಿಜ್ಞಾತಾರಂ ವಿಧಿಜ್ಞಾನವಿಶಾರದಮ್ ।**
**ಸನ್ಮಾರ್ಗ ಲೋಕಶಿಕ್ಷಾರ್ಥಂ ಶ್ರೀ ವಿದ್ಯಾಭಾಸ್ಕರಂ ಭಜೇ ॥**

ಶ್ರೀ ಶ್ರೀ 1008 ಶ್ರೀ ವಿದ್ಯಾಭೂಷಣ ತೀರ್ಥ ಶ್ರೀಪಾದಂಗಳವರ ಕರಕಮಲಸಂಜಾತರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಭಾಸ್ಕರ ತೀರ್ಥ ಶ್ರೀಪಾದಂಗಳವರು ಶ್ರೀ ಮಾಧವ ತೀರ್ಥ ಶ್ರೀಪಾದಂಗಳವರಿಂದ ಆರಂಭಗೊಂಡ ಕಣ್ವಮಠದ 12ನೇಯ ಪೀಠಾಧಿಕಾರಿಗಳು. ತಮ್ಮ 72ನೇಯ ಇಳಿ ವಯಸ್ಸಿನಲ್ಲಿ ಪೀಠವನ್ನು ಅಲಂಕರಿಸಿ ಸತತ 22 ವರ್ಷಗಳ ಕಾಲ ಶ್ರೀ ವಿಠ್ಠಲಕೃಷ್ಣನ ಪೂಜೆಗೈದ ಪ್ರಾತಃಸ್ಮರಣೀಯರು. ಶುಕ್ಲಯಜುರ್ವೇದ ಪರಂಪರೆಯ ಶ್ರೇಷ್ಠತೆ ಹಾಗೂ ಶ್ರೀ ಯಾಜ್ಞವಲ್ಕ್ಯರ ಜೇಷ್ಠತೆಯನ್ನು ಇಡೀ ಭಾರತೀಯರಿಗೆ ತಿಳಿಯಪಡಿಸಿದವರು. ಗುರು ಮಾಧವತೀರ್ಥರ ಕನಸನ್ನು ಸಾಕಾರಗೊಳಿಸಿದವರು. ಆತ್ಮಾಭಿಮಾನದ ಜ್ಯೋತಿಯನ್ನು ಬೆಳಗಿದ ಮಹಾನ್ ಯತಿವರೇಣ್ಯರು. ಇವರು ಗುರು ಯಾಜ್ಞವಲ್ಕ್ಯರ ಏಕಾಂತ ಭಕ್ತರು. ಅಪ್ಪಟ ಕಣ್ವಾಭಿಮಾನಿಗಳು, ಸಂಸ್ಕೃತ ಪಂಡಿತರು, ಆಧ್ಯಾತ್ಮಿಕ ಸಂಶೋಧಕರು, ಉತ್ತಮ ವಾಕ್ ಚಾತುರ್ಯವನ್ನು ಹೊಂದಿದವರು. ಇಂಗ್ಲೀಷ, ಹಿಂದಿ, ತೆಲುಗು, ಮರಾಠಿ, ಉರ್ದು ಭಾಷೆಗಳಲ್ಲಿ ನಿರ್ಗಳವಾಗಿ ಮಾತನಾಡಬಲ್ಲವರಾಗಿದ್ದರು.

ಶ್ರೀಪಾದರ ಪೂರ್ವಾಶ್ರಮದ ಹೆಸರು "ಶ್ರೀನಿವಾಸಪ್ಪಯ್ಯ ತಿಮ್ಮಪ್ಪಯ್ಯ ದೇವರು". ದೇವರು ಮನೆತನವು ಆರ್ಥಿಕವಾಗಿಯೂ ಹಾಗೂ ಆಧ್ಯಾತ್ಮಿಕವಾಗಿಯೂ ಬಹು ಶ್ರೀಮಂತ ಹಾಗೂ ಹೆಸರುವಾಸಿಯಾದ ಮನೆತನ. ಈ ಮನೆತನವು "ದೇವರು" ಎಂದು ಅಡ್ಡನಾಮ ಪಡೆಯುವುದರ ಹಿಂದೆ ರೋಚಕ ದೈವಿಕ ಘಟನೆಗಳಿವೆ.

ಸುಮಾರು (200–300) ವರ್ಷಗಳ ಹಿಂದೆ ಈ ಮನೆತನದ ಪೂರ್ವಜರು ಯಾದಗೀರ ಜಿಲ್ಲೆಯ ಸುರಪುರ ತಾಲೂಕಿನ ತಿಂಥಿಣಿ ಗ್ರಾಮದ ಕುಲಕರ್ಣಿಗಳಾಗಿದ್ದರು. ಈ ಮನೆತನದವರೇ ಆದ "ಗಿರಿಯಪ್ಪಯ್ಯ"ನವರು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿ ನೆಲೆಸಿದ್ದರು. ಇವರಿಗೆ ಬಹುದಿನಗಳಿಂದ ಸಂತಾನ ಪ್ರಾಪ್ತಿಯಾಗಿರಲಿಲ್ಲ. ಸಂತಾನಪೇಕ್ಷೆಗಾಗಿ ಕುಲದೇವರಾದ ಸೇಡಂ ತಾಲೂಕಿನ ಮೋತಕಪಲ್ಲಿ ಪ್ರಾಣದೇವರ ಮೊರೆಹೊಕ್ಕಿದ್ದರು. ಆ ದೇವಸ್ಥಾನದಲ್ಲಿಯೇ ಬಹುದಿವಸಗಳಿಂದ ನೆಲೆಸಿ ಅನುಷ್ಠಾನದೊಂದಿಗೆ ಕಠಿಣ ಸೇವೆಗೈದಿದ್ದರು. ಒಂದು ದಿವಸ ಪ್ರಾಣದೇವರು ಸ್ವಪ್ನದಲ್ಲಿ ಕಾಣಿಸಿಕೊಂಡು "ನನ್ನ

ದಾಸನಾಗು" ಎಂದು ಆಜ್ಞೆಯಿತ್ತನು. ಮೇಲಿಂದ ಮೇಲೆ ದಾಸನಾಗು, ದಾಸನಾಗು ಎಂದು ಕೇಳತೊಡಗಿದನು. ಆದರೆ ತಾವೊಬ್ಬ ಅನಕ್ಷರಸ್ಥ, ಮೇಲಾಗಿ ಆಧ್ಯಾತ್ಮಿಕ ಜ್ಞಾನವಿಲ್ಲದವನು. ನಾನ್ಹೇಗೆ ದಾಸನಾಗುವುದು? ಎಂದು ಚಿಂತಾಕ್ರಾಂತರಾದರು. ಭಗವಂತನಿಂದ ಪುತ್ರಾಪೇಕ್ಷೆಯ ಆಶೀರ್ವಾದವಂತು ದೊರಕಲಿಲ್ಲ, ಮೇಲೆ ಭಗವಂತನಿಂದ ಇಂಥ ಆಜ್ಞೇಯೇ? ಎಂದು, ಏನೂ ಮಾಡಲು ತೋಚದೆ ನಿರಾಸೆಯಿಂದ ತಮ್ಮೂರಿಗೆ ಮರಳಲು ನಿಶ್ಚಯಿಸಿದರು. ಆಗ ಕಾಲ್ನಡಿಗೆಯಲ್ಲೇ ಪ್ರಯಾಣ ಮಾಡಬೇಕಾಗುತ್ತಿತ್ತು. ಮೋತಕಪಲ್ಲಿಯನ್ನು ದಾಟಿ ಒಂದೆರಡು ಕಿಲೋಮೀಟರನಷ್ಟು ದಾರಿ ಸಾಗಿದ ಮೇಲೆ ಹಳ್ಳವನ್ನು ದಾಟಬೇಕಾಗಿ ಬರುತ್ತದೆ. ವೈಶಾಖ ಮಾಸ ಹಳ್ಳದಲ್ಲಿ ನೀರಿನ ಹರಿವಂತು ಕಡಿಮೆಯಿದೆ ಎಂದು ಯೋಚಿಸುತ್ತ ಅರ್ಧ ಹಳ್ಳ ದಾಟಿ ನಡು ಮಧ್ಯೆಯಿರುವಾಗಲೇ ಎಲ್ಲಿಂದಲೋ ನೀರು ಪ್ರವಾಹೋಪಾದಿಯಲ್ಲಿ ಹರಿದು ಬಂದು ಈ ಮಹಾತ್ಮರು ಮುಳುಗುವಂತಾಗುತ್ತದೆ. ಈ ಅಘಟಿತ ಘಟನೆಯಿಂದ ದಿಕ್ಕು ತೋಚದೇ ಇರುವಾಗಲೇ ಮತ್ತೆ ಅಶರೀರವಾಣಿಯಾಗುತ್ತದೆ, "ನಿನ್ನ ಪ್ರಾಣ ಉಳಿಯಬೇಕಾದರೆ ನನ್ನ ದಾಸನಾಗು" ಎಂದು. "ನಿನ್ನ ಚಿತ್ತಕ್ಕೆ ಬಂದುದೆನ್ನ ಚಿತ್ತಕ್ಕೆ ಬರಲಿ" ಎಂಬ ದಾಸರ ನುಡಿಯಂತೆ ದಾಸನಾಗಲು ಒಪ್ಪಿಕೊಂಡ ಮೇಲೆ ನೀರಿನ ಹರಿವು ತಾನಾಗಿಯೇ ಕಡಿಮೆಯಾಗುತ್ತದೆ. ಮರಳಿ ಮೋತಕಪಲ್ಲಿಗೆ ಹಿಂತಿರುಗಿ ದೇವಸ್ಥಾನದಲ್ಲಿಯೇ ನೆಲೆಸಿ ಪ್ರಾಣದೇವರ ಸೇವೆಗೈಯುತ್ತ ಅಲ್ಲಿಯೇ ನೆಲೆಸಲು ನಿಶ್ಚಯಿಸುತ್ತಾರೆ. ಮತ್ತೆ ಪ್ರಾಣದೇವರು ಸ್ವಪ್ನದಲ್ಲಿ ಬಂದು ನಿನ್ನ ಮೂಲಸ್ಥಾನಕ್ಕೆ ಹೋಗು, ನಾನು ಅಲ್ಲಿಯೇ ಬರುತ್ತೇನೆ ಎಂದು ಆಜ್ಞೆಯಿತ್ತನು. ಹಾಗೆಯೇ ದೇವಸ್ಥಾನದ ಅರ್ಚಕರಿಗೂ ದೇವರ ದಂಡಿಗೆಯನ್ನು ದಾಸರಿಗೆ ಕಾಣಿಕೆಯಾಗಿ ಕೊಡಲು ಸ್ವಪ್ನದಲ್ಲಿ ಆಜ್ಞೆಯಿತ್ತನು. ಗಿರಿಯಪ್ಪಯ್ಯನವರು ದೇವರ ದಂಡಿಗೆಯನ್ನು ಪಡೆದು ತಮ್ಮೂರಿಗೆ ಬರುವಷ್ಟರಲ್ಲಿಯೇ ದೇವದುರ್ಗದ ಇವರ ಮನೆಯ ಹಿಂಭಾಗದಲ್ಲಿರುವ ಗುಡ್ಡಕ್ಕೆ ಹತ್ತಿಕೊಂಡ ಕಲ್ಲುಬಂಡೆಯ ಮೇಲೆ "ಪ್ರಾಣದೇವರು" ಒಡಮೂಡಿದ್ದರು. ಈ ಮೂರ್ತಿಯ ವೈಶಿಷ್ಟ್ಯತೆಯೆಂದರೆ ಬಲಭಾಗದ ಹಸ್ತ ಮತ್ತು ಪಾದ ಎಡಬಾಗಕ್ಕಿಂತಲೂ ದೊಡ್ಡದಾಗಿವೆ. ಊರಿಗೆ ಮರಳಿ ಬಂದು ಕಲ್ಲುಬಂಡೆಯ ಮೇಲೆ ಪ್ರಾದುರ್ಭವಿಸಿದ ಪ್ರಾಣದೇವರನ್ನು ಕಂಡು ಧನ್ಯರಾಗಿ ಭಗವತ್‌ಚಿಂತನೆಯಲ್ಲಿಯೇ ಕಾಲಕಳೆಯತೊಡಗಿದರು.

ಒಮ್ಮೆ ತಿರುಪತಿ ತಿಮ್ಮಪ್ಪನ ದರುಶನಕ್ಕೆ ಹೋದಾಗ ಅಲ್ಲಿಯೇ ಸ್ಥಿರವಾಗಿ ನೆಲೆಸಲು ನಿರ್ಧರಿಸಿದಾಗ ಭಗವಂತ ಸ್ವಪ್ನದಲ್ಲಿ ಬಂದು "ನಿನ್ನ ಮೂಲಸ್ಥಾನಕ್ಕೆ ಹೋಗು ನಾನು ಅಲ್ಲಿಯೇ ಬರುತ್ತೇನೆ, ನೀನು ಅಲ್ಲಿಯೇ ನೆಲೆಸಿ ಭಕ್ತರನ್ನು ಉದ್ಧರಿಸು" ಎಂದು ಆಜ್ಞೆಯಿತ್ತನು. ದೇವರ ಆಜ್ಞೆಯಂತೆ ಮರಳಿ ದೇವದುರ್ಗಕ್ಕೆ ಬಂದು ದೇವರ ಆಗಮನದ ನಿರೀಕ್ಷೆಯಲ್ಲಿರುತ್ತಾರೆ. ಸ್ವಲ್ಪ ದಿವಸಗಳ ನಂತರ ಸ್ವಪ್ನದಲ್ಲಿ ಸೂಚಿಸಿರುವಂತೆ ಇವರ ಗ್ರಾಮದ ಹತ್ತಿರವಿರುವ ಇನ್ನೊಂದು ಚಿಕ್ಕ ಗ್ರಾಮದಲ್ಲಿ ವಾಸವಾಗಿದ್ದ "ದೇಸಾಯ"ರ ಮನೆಯವರ ಬಳಿಯಿದ್ದ "ಅರಳಿಚೆಕ್" ನಲ್ಲಿರುವ ದೇವರ ವಿಗ್ರಹಗಳನ್ನು ಪಡೆದುಕೊಳ್ಳಲು ಹೋದಾಗ ಅಲ್ಲಿ ಬಹಳಷ್ಟು ಅರಳಿಚೆಕ್ (ಅರಳಿಕಟ್ಟು) ಗಳಿದ್ದವು. ಯಾವ 'ಚೆಕ್'ನಲ್ಲಿ ಭಗವಂತನ ವಿಗ್ರಹಳಿವೆಯೆಂದು ತಿಳಿಯದೇ ಗಲಿಬಿಲಿಗೊಳ್ಳುವರು. ಆಗ ಮತ್ತೆ ಅನಿರೀಕ್ಷಿತ ಘಟನೆ ಘಟಿಸುತ್ತದೆ.

ಅವರ ಮನೆಯ ಬಳಿಯಿದ್ದ ಒಂದು ಅರಳಿ ಚಕ್ಕಿಗೆ ಬೆಂಕಿ ಹತ್ತಿ ಉರಿಯತೊಡಗುತ್ತದೆ. ಉರಿ ಆರಿ ತಣ್ಣಗಾದ ಮೇಲೆ ಗಾಳಿ ಬೀಸಿ, ಬೂದಿ ಹಾರಿಕೊಂಡು ಹೋಗಿ, ಆ ಸ್ಥಳದಲ್ಲಿ ಶ್ರೀದೇವಿ, ಭೂದೇವಿ ಹಾಗೂ ಶ್ರೀನಿವಾಸ ದೇವರ ವಿಗ್ರಹಗಳನ್ನು ಪಡೆದುಕೊಂಡರು.

ಗಿರಿಯಪ್ಪಯ್ಯನವರು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡಿದ್ದರಿಂದ ಇವರಲ್ಲಿ ಗ್ರಾಮದ ಜನರು ದೇವರನ್ನು ಕಾಣತೊಡಗಿದ್ದರಿಂದ "ದೇವರು" ಮನೆತನವೆಂದು ಹೆಸರಾಯಿತು. ಹಾಗೆಯೇ ಇವರಾಡಿದ ಮಾತುಗಳೆಲ್ಲಾ ಸತ್ಯವಾಗುತ್ತಿದ್ದುದರಿಂದ, ಅವರನ್ನು ಗೌರವಯುತವಾಗಿ "ಅಪ್ಪಯ್ಯ" ಎಂದು ಸಂಭೋದಿಸಿದ್ದರಿಂದ ಈ ಮನೆತನದವರ ಹೆಸರಿನ ಜೊತೆಗೆ "ಅಪ್ಪಯ್ಯ" ಎಂಬ ನಾಮವಿಶೇಷಣವು ಬಂದಿತು.

ಭಗವಂತನ ಕೃಪಾಶೀರ್ವಾದದಿಂದ 'ಗಿರಿಯಪ್ಪಯ್ಯ ದೇವರು' ಮಹಾನ್ ಸಿದ್ಧಿ ಪುರುಷರಾಗಿ ರೂಪುಗೊಂಡರು. ತಮ್ಮ ಕುಲಸ್ವಾಮಿಗಳಾದ ಮೋತಕಪಲ್ಲಿ ಪ್ರಾಣದೇವರಿಗೂ ಹಾಗೂ ವೆಂಕಟಗಿರಿ ಕ್ಷೇತ್ರಕ್ಕೂ ಅವಿಚ್ಛಿನ್ನವಾಗಿ, ವಿಧಿವತ್ತಾಗಿ ಭಕ್ತರೊಂದಿಗೆ ಯಾತ್ರೆ ಕೈಗೊಳ್ಳುತ್ತಿದ್ದರು. ಮಾರ್ಗ ಮಧ್ಯೆ ಬರುವ ಆಯಾ ಕ್ಷೇತ್ರಗಳಲ್ಲಿ ನೆಲೆಸಿ ಭಕ್ತರನ್ನು ಒಗ್ಗೂಡಿಸಿ, ಜ್ಞಾನೋಪದೇಶ ನೀಡಿ ಅವರಲ್ಲಿ ಧರ್ಮ ಜಾಗೃತಿಯನ್ನು ಮೂಡಿಸುತ್ತಿದ್ದರು. ಉದಾ: ತನ್ನದೇ ಆದ ಅಪಾರ ಸಂಖ್ಯೆಯ ಭಕ್ತರನ್ನು ಹೊಂದಿದ ಸಾಧ್ವಿ ಶಿರೋಮಣಿ ತುರಡಗಿ ತಿಮ್ಮಮ್ಮನವರು, ಇವರ ಶಿಷ್ಯತ್ವ ವಹಿಸಿ, ಇವರನ್ನೇ ತನ್ನ ಸ್ವರೂಪೋದ್ಧಾರಕ ಗುರುಗಳನ್ನಾಗಿ ಮಾಡಿಕೊಂಡು "ಕಿಂ ಬಹುನಾ ಜ್ಞಾನಿ" ಯಾದಳು ಎಂದ ಮೇಲೆ ಗಿರಿಯಪ್ಪಯ್ಯನವರ ವ್ಯಕ್ತಿತ್ವ ಹಾಗೂ ಮಹಿಮೆ ವರ್ಣಿಸಲಸಾಧ್ಯ. ಇನ್ನು ಸರ್ವಸಾಧಾರಣ ಈ ಮನೆತನದ ಬಹಳಷ್ಟು ಜನ ಪೂರ್ವಜರು ದೈವತ್ವವನ್ನು ಪಡೆದುಕೊಂಡಿದ್ದರು ಎಂಬುದು ನಡೆದಿರುವ ಘಟನೆಗಳಿಂದ ತಿಳಿದುಬರುತ್ತದೆ.

ಈ ಮನೆತನದ ಮತ್ತೊಬ್ಬ ಹಿರಿಯ ಪುರುಷರು ತಿರುಪತಿಗೆ ಹೋದಾಗ ಅಲ್ಲಿ ನೆಲೆಸಲು ಸ್ಥಳ ಸಿಗದೇ ಪರಿತಪಿಸುತ್ತಿದ್ದಾಗ, ಭಗವಂತನ ಆಜ್ಞೆಯಂತೆ ಅಲ್ಲಿಯ ಮಹಾಂತರಿಂದ "ಆದಿತ್ಯ ಮಂಟಪ" ದಲ್ಲಿ ನೆಲೆಸಲು ಸ್ಥಳಾವಕಾಶ ದೊರೆಯುತ್ತದೆ. ಈ ಆದಿತ್ಯ ಮಂಟಪದ ವಿಶೇಷತೆಯೆಂದರೆ, ಪ್ರತಿ ರವಿವಾರದಂದು ತಿಮ್ಮಪ್ಪನ ಉತ್ಸವ ಮೂರ್ತಿಯ ತೊಟ್ಟಿಲು ಸೇವೆಯನ್ನು ಈ ಮಂಟಪದಲ್ಲಿ ಮಾಡಲಾಗುತಿತ್ತು. ಇಂತಹ ಪೂಜಿತ ಸ್ಥಳವು ದೊರೆತಾಗ ಸಂತಸ ಹೇಳಲಸಾಧ್ಯ. ಆದರೆ ಈ ಮಂಟಪವು ಮತ್ತೊಂದು ವಿಚಿತ್ರ ಘಟನೆಗೆ ಸಾಕ್ಷಿಯಾಗುತ್ತದೆ. ಅದೇನೆಂದರೆ ರಾತ್ರಿ ವೇಳೆಯಲ್ಲಿ ಇಲ್ಲಿ ಮಲಗಿಕೊಂಡವರು, ಬೆಳಗಾಗುವುದರೊಳಗೆ ಸ್ವಾಮಿ ಪುಷ್ಕರಣಿಯ ಹತ್ತಿರ ಮಲಗಿಕೊಂಡಿರುತ್ತಿದ್ದರಂತೆ. ಹೀಗೇಕೆ ಎಂದು ಆಲೋಚಿಸುತ್ತಿದ್ದಾಗ ಮತ್ತೆ ಭಗವಂತನ ದಯದಿಂದ ಈ ಕುಚೇಷ್ಟೆಗಳೆಲ್ಲವೂ ಆ ಮಂಟಪದಲ್ಲಿ ವಾಸವಾಗಿದ್ದ ಬ್ರಹ್ಮರಾಕ್ಷಸನದ್ದು ಎಂದು ಗೊತ್ತಾಗುತ್ತದೆ. ಆಗ ಬ್ರಹ್ಮರಾಕ್ಷಸವು ಇವರಿಗೆ ಒಂದು ಜಾಂಗಟೆಯನ್ನು ಕೊಟ್ಟು, ಇಲ್ಲಿ ಬಂದು ಜಾಂಗಟೆ ಬಾರಿಸಿದರೆ ನಾನೀ ಸ್ಥಳ ಬಿಟ್ಟು

ಹೋಗುವೆ, ಹಾಗೂ ನನ್ನ ಅಂತ್ಯಕಾಲವಾದ ಮೇಲೆ ಈ ಜಾಂಗಟೆ ತನ್ನಿಂದ ತಾನೇ ಸೀಳಿಬಿಡುತ್ತದೆ ಎಂದು ಆಶ್ವಾಸನೆ ನೀಡುತ್ತದೆ. ಅಂತಯೇ ಸುಮಾರು 70 ವರ್ಷಗಳ ಹಿಂದೆ ಈ ಜಾಂಗಟೆ ಸೀಳಿದಾಗ ಭಾರಿ ಶಬ್ದವಾಯಿತೆಂದು, ಆ ಶಬ್ದವನ್ನು ತಮ್ಮ ಅಜ್ಜಿಯವರು ಕೇಳಿಸಿಕೊಂಡಿದ್ದರೆಂದು ಶ್ರೀಪಾದರ ಪೂರ್ವಾಶ್ರಮದ ಪುತ್ರರಾದ ಶ್ರೀಯುತ ಮೋಹನ ದೇವರು ಹೇಳುತ್ತಾರೆ.

ತಿರುಪತಿಯಲ್ಲಿ ಈ ಮನೆತನದ ಮತ್ತೊಬ್ಬ ಹಿರಿಯರಿಗಾದ ಇನ್ನೊಂದು ವಿಶೇಷ ಘಟನೆಯೆಂದರೆ ತಿರುಪತಿ ತಿಮ್ಮಪ್ಪನ ಕೊರಳಲ್ಲಿ ಸಾಲಿಗ್ರಾಮ ಗಳನ್ನೊಳಗೊಂಡ ವೈಜಯಂತಿ ಮಾಲೆ ಹಾಕಿರುತ್ತಾರೆ. ಈ ಮನೆತನದ ಹಿರಿಯರಿಗೆ ಆ ಮಾಲೆಯಲ್ಲಿರುವ ಸಾಲಿಗ್ರಾಮದ ಪೂಜೆ ಮಾಡುವ ಅಪೇಕ್ಷೆಯಾಗುತ್ತದೆ. ಅಂತೆಯೇ ತಮ್ಮ ಈ ಆಸೆಯನ್ನು ಅರ್ಚಕರ ಮುಂದೆ ಅರುಹಿದಾಗ, ಅರ್ಚಕರಿಗೆ ಏನು ಹೇಳಲು ತೋಚದೇಯಿದ್ದಾಗ, ತಟ್ಟನೆ ಆ ಮಾಲೆಯಲ್ಲಿರುವ ಒಂದು ಸಾಲಿಗ್ರಾಮವು ಕಳಚಿ ಬೀಳುತ್ತದೆ. ಎಲ್ಲರಿಗೂ ಆಶ್ಚರ್ಯದೊಂದಿಗೆ ಸಂತಸವಾಗುತ್ತದೆ. ಅರ್ಚಕರು ಭಕ್ತಿ ಭಾವದೊಂದಿಗೆ ಆ ಸಾಲಿಗ್ರಾಮವನ್ನು ಈ ಹಿರಿಯರಿಗೆ ಒಪ್ಪಿಸಿಬಿಟ್ಟರು. ಇಂದಿಗೂ ದೇವದುರ್ಗದ ಮೂಲ ಮನೆಯಲ್ಲಿ ಸಾಲಿಗ್ರಾಮ ದೇವರು ಪೂಜೆಗೊಳ್ಳುತ್ತಿದ್ದಾನೆ.

ಸಾಲಿಗ್ರಾಮದೊಂದಿಗೆ, ಬ್ರಹ್ಮೋತ್ಸವದ ಸಮಯದಲ್ಲಿ ಒಂದು ದಿವಸ ತಿಮ್ಮಪ್ಪನ ಪೂಜೆ ಮಾಡುವ ಸೌಭಾಗ್ಯವನ್ನು ಪಡೆದಂತಹ ಮಹಾನ್ ಮನೆತನ. (ಇತ್ತೀಚಿನ ವರ್ಷಗಳಲ್ಲಿ ಈ ಸಂಪ್ರದಾಯ ನಿಂತು ಹೋಗಿದೆ).

ಭಕ್ತಾಭಿಮಾನಿ ಎನಿಸುವ ಭಗವಂತ ಮತ್ತೊಮ್ಮೆ ಶ್ರೀರಾಮಚಂದ್ರನ ರೂಪದಲ್ಲಿ 'ದೇವರು' ಮನೆಗೆ ಬಂದದ್ದು ಬಹು ವಿಶೇಷ.

ಸುಮಾರು 180 ವರ್ಷಗಳ ಹಿಂದೆ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದ ಶ್ರೀಪಾದಂಗಳವರು (ಹೆಸರು ತಿಳಿದಿಲ್ಲ) "ಕೊಪ್ಪರ ನರಸಿಂಹ" ದೇವರ ದರ್ಶನ ಮಾಡಿಕೊಂಡು ಬರುವಾಗ ಮಾರ್ಗ ಮಧ್ಯದಲ್ಲಿರುವ ದೇವದುರ್ಗ ದಿಗ್ವಿಜಯಕ್ಕೆ ಬಂದಾಗ 'ದೇವರು' ಅವರ ಮನೆಯಲ್ಲಿ ಶ್ರೀಮಠದ ಸಂಸ್ಥಾನ ಪೂಜೆ ಏರ್ಪಡಿಸಿರುತ್ತಾರೆ. ಶ್ರೀಪಾದ ಶಿಷ್ಯಂದಿರು "ಶ್ರೀ ಮೂಲರಾಮ" ದೇವರ ಪೂಜೆಗೆ ತೋಟದ ತುಳಸಿಯನ್ನು ಬಿಡಿಸಿಕೊಂಡು ತಂದಿಟ್ಟಿರುತ್ತಾರೆ. ಅದೇ ಸಮಯಕ್ಕೆ ದೇವರು ಅವರು ತಮ್ಮ ಮನೆಯ ಅಂಗಳದಲ್ಲಿರುವ ವೃಂದಾವನದ ತುಳಸಿಯನ್ನು ತಂದಿಟ್ಟಿರುತ್ತಾರೆ. ಶ್ರೀಪಾದರು ಇನ್ನೇನು ದೇವರಿಗೆ ಅರ್ಚಿಸಲು ತುಳಸಿಯನ್ನು ತೆಗೆದುಕೊಳ್ಳುತ್ತಿರುವಾಗ ಮನೆಯ ಯಜಮಾನರು "ನಮ್ಮ ತುಳಸಿಯೇ ಅರ್ಚನೆಗೆ ಯೋಗ್ಯ, ನಿಮ್ಮ ಶಿಷ್ಯಂದಿರು ತಂದ ತುಳಸಿ ನೈರ್ಮಲ್ಯವಾಗಿದೆ", ಎಂದು ಹೇಳಿದಾಗ ಶ್ರೀಪಾದರಿಗೆ ಆಶ್ಚರ್ಯವಾಗುತ್ತದೆ. ದೀರ್ಘವಾಗಿ ಆಲೋಚಿಸಿದಾಗ ತಮ್ಮ ಅಂತರ್‌ಚಕ್ಷುವಿನಿಂದ ಆ ದೃಶ್ಯಗಳು ಗೋಚರವಾಗುತ್ತವೆ. ಹೌದು! ತಮ್ಮ ಪ್ರಯಾಣದ ಮಾರ್ಗ ಮಧ್ಯದಲ್ಲಿ ತುಳಸಿ ತೋಟಕ್ಕೆ ಸಂದರ್ಶನಗೈದಾಗ ಅಲ್ಲಿ ಹಚ್ಚಹಸುರಿನಿಂದ

ಕಂಗೊಳಿಸುತ್ತಿದ್ದ ತುಳಸಿಯನ್ನು ಕಂಡು ಆನಂದದಿಂದ ಕೃಷ್ಣಾರ್ಪಣವೆಂದಿದ್ದೆ, ಅದಕ್ಕಾಗಿಯೇ ಈ ತುಳಸಿ ನೈರ್ಮಲ್ಯವಾಯಿತೆಂದು ಅರ್ಥವಾಯಿತು. ಇಂತಹ ಪುಣ್ಯಶ್ಲೋಕರನ್ನು ನೋಡಿ ಆನಂದವಾಗಿ ತಮ್ಮ ಬಳಿಯಿದ್ದ "ಶ್ರೀರಾಮಚಂದ್ರ" ನ ವಿಗ್ರಹವನ್ನು ಕಾಣಿಕೆಯಾಗಿ ನೀಡಿದರು. ಈ ಮನಮೋಹಕ, ಆಕರ್ಷಕ ಮೂರ್ತಿಯನ್ನು ನೋಡಿದಾಗ, "ಸುಂದರ ಮೂರುತಿಯ ಶ್ರೀರಾಮ ಬಂದ ಮನೆಗೆ" ಎಂಬ ದಾಸರ ನುಡಿ ನೆನಪಾಗುತ್ತದೆ. ಇಂತಹ ಅಭೂತಪೂರ್ವ, ದೈವಿಕ ಘಟನೆಗಳಿಗೆ ಸಾಕ್ಷಿಯಾದ, ಆಧ್ಯಾತ್ಮಿಕ ಮೇರು ಶಿಖರದಂತಿರುವ ಮನೆತನದಲ್ಲಿ ನಮ್ಮ ಶ್ರೀಪಾದರ ಜನನವಾಯಿತು.

ಕಣ್ವ ಶಾಖೀಯ ವೈಷ್ಣವ ಸಂಪ್ರದಾಯದ, ಆತ್ರೇಯ ಗೋತ್ರದ ಶ್ರೀ ತಿಮ್ಮಪ್ಪಯ್ಯ ಹಾಗೂ ಸೌ॥ ಪದ್ಮಾವತಿಬಾಯಿ ದಂಪತಿಗಳ 3ನೇಯ ಸುಪುತ್ರನಾಗಿ ಜನಿಸಿದರು. ಶಾಲಿವಾಹನ ಶಕೆ 1847 (ಕ್ರಿ.ಶ.1925) ಕ್ರೋಧನನಾಮ ಸಂವತ್ಸರದ ಅಕ್ಟೋಬರ್ 24 ಕಾರ್ತಿಕ ಶುದ್ಧ ಸಪ್ತಮಿ ಶನಿವಾರ ಶುಭ ದಿವಸ (ಶ್ರೀ ಯಾಜ್ಞವಲ್ಕ್ಯ ಜಯಂತಿ) ಜನಿಸಿದ ಮಗುವಿಗೆ "ಶ್ರೀನಿವಾಸಪ್ಪಯ್ಯ" ಎಂದು ಸುನಾಮವನ್ನಿಟ್ಟರು.

ಶ್ರೀನಿವಾಸಪ್ಪಯ್ಯನವರು "ಜನ್ಮನಾ ಬ್ರಾಹ್ಮೋಣ ಜ್ಞೇಯ, ಸಂಸ್ಕಾರಾತ ದ್ವಿಜ ಉಚ್ಚತೆ" ಎಂಬಂತೆ ಹುಟ್ಟಿ ಬೆಳೆದು ಸಂಸ್ಕಾರಗೊಂಡಿದ್ದು ಅಧ್ಯಯನಶೀಲ ಸಂಸ್ಕಾರಭರಿತ ಮನೆತನದಲ್ಲಿ, ಹಾಗಾಗಿಯೇ ಶುಕ್ಲಯಜುರ್ವೇದಿಯ ಪರಂಪರೆ ಹಾಗೂ ಕಣ್ವಮತದ ಗುರುಪರಂಪರೆಯ ಉಪಾಸನೆಗಳು ತಂದೆಯಿಂದ ಬಳುವಳಿಯಾಗಿ ಬಂದರೆ, ವೇದ, ತರ್ಕ, ಪುರಾಣ, ಶಾಸ್ತ್ರಗಳ ಜ್ಞಾನವನ್ನು ಶುಕ್ಲ ಯಜುರ್ವೇದಿಯ ಪಂಡಿತರಾದಂತಹ ವೇದಮೂರ್ತಿ ಕನಸಾವಿ ರಾಮಾಚಾರ್ಯ ಗುರುಗಳಿಂದ ಪಡೆದುಕೊಂಡರು.

ಬಾಲ್ಯದಲ್ಲಿ ಸಂಸ್ಕೃತ ಅಧ್ಯಯನ ಜೊತೆಗೆ ತಮ್ಮ ಪ್ರಾಥಮಿಕ ಶಿಕ್ಷಣವನ್ನು ದೇವದುರ್ಗದ ಶಾಲೆಯಲ್ಲಿ ಮಾಡಿದರು. ಇಂಟರಮೀಡಿಯಟ್‌ನ್ನು ಹೈದ್ರಾಬಾದನಲ್ಲಿ ಮುಗಿಸಿ ಕ್ರಿ.ಶ.1949 ರಲ್ಲಿ ನಿಜಾಮ ಕಾಲೇಜಿನಿಂದ ಪದವಿ ಮುಗಿಸಿದರು. ಕ್ರಿ.ಶ.1951 ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯುದಿಂದ 'ಎಲ್‌ಎಲ್.ಬಿ.' ಪದವಿ ಪಡೆದುಕೊಂಡರು. ಕ್ರಿ.ಶ.1959 ರಿಂದ ರಾಯಚೂರಿನಲ್ಲಿ ವಕೀಲಿ ವೃತ್ತಿ ಆರಂಭಿಸಿದರು.

'ವೃತ್ತಿಯಲ್ಲಿ ನ್ಯಾಯವಾದಿ, ಪ್ರವೃತ್ತಿಯಲ್ಲಿ ಸಾಮಾಜಿಕ ಚಿಂತನೆ'. ಹೌದು! ಸಮಾಜಮುಖಿಯಾಗಿ ಸಮಾಜದ ವಿವಿಧ ಸಂಘ ಸಂಸ್ಥೆಗಳಲ್ಲಿ ರಚನಾತ್ಮಕ ಚಟುವಟಿಕೆಗಳಲ್ಲಿಯೂ ಪಾಲ್ಗೊಂಡಿದ್ದರು. ಕ್ರಿ.ಶ. 1953 ರಲ್ಲಿ ತಾರಾನಾಥ ಶಿಕ್ಷಣ ಸಂಸ್ಥೆಯಲ್ಲಿ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. 15 ವರ್ಷ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಹಾಗೂ ಅಖಿಲ ಭಾರತ ಬ್ರಾಹ್ಮಣ ಫೆಡರೇಶನ್ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಕೃಷಿ ಚಟುವಟಿಕೆಗಳಲ್ಲಿ ವಿಶೇಷ ಆಸಕ್ತಿ. ನೇಗಿಲಯೋಗಿ–ರೈತಬಾಂಧವರ ಬಗೆಗೆ ಬಹಳ ಕಾಳಜಿ, ಅಂತೆಯೇ 15 ವರ್ಷಗಳ ಕಾಲ ಕೃಷಿಕ ಸಮಾಜದ ಅಧ್ಯಕ್ಷರಾಗಿ ಉತ್ತಮ ಕಾರ್ಯ ನಿರ್ವಹಿಸಿದ ಇವರ ಕಾರ್ಯಾಚಾತುರ್ಯತೆಯನ್ನು ಗಮನಿಸಿ ಕೃಷಿ ವಿಶ್ವವಿದ್ಯಾಲಯದ ಆಗಿನ ಕುಲಪತಿಗಳಾದ ಪ್ರೊ॥ ರಾಸ ಅವರು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಕ್ರಿ.ಶ. 1963–1965 ರವರೆಗೆ ನಗರ ಸಭೆಯ ಸದಸ್ಯರಾಗಿಯೂ, ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಜನ್ಮತಃ ಇವರಿಗೆ ಕಣ್ವಮಠದ ಮೇಲೆ ಅಭಿಮಾನ, ಭಕ್ತಿ, ಸತತವಾಗಿ ಶ್ರೀಮಠದ ಅಭಿವೃದ್ಧಿ ಹಾಗೂ ಶ್ರೇಯಸ್ಸಿಗಾಗಿ ಚಿಂತನೆಗೈಯ್ಯುತ್ತಿದ್ದರು. ಅಂತೆಯೇ ಶ್ರೀ ಶ್ರೀ ವಿದ್ಯಾತಪೋನಿಧಿ ತೀರ್ಥರು ಹಾಗೂ ಶ್ರೀ ಶ್ರೀ ವಿದ್ಯಾಭೂಷಣತೀರ್ಥದ್ವಯರನ್ನು ಮಠದ ಪೀಠಾಧಿಪತಿಗಳನ್ನಾಗಿ ಮಾಡುವಲ್ಲಿ ಬಹಳ ಶ್ರಮವಹಿಸಿದ್ದರು.

ಇವರು ಕಾನೂನು ವಿದ್ಯಾರ್ಥಿಗಳು, ಹಾಗಾಗಿಯೇ ಕಾನೂನು ಪದವಿ ವಿದ್ಯಾರ್ಥಿಗಳಿಗೆ ಪಾಠವಾಗಿರುವ "ಮಿತಾಕ್ಷರ"ವನ್ನು ಅಧ್ಯಯನ ಮಾಡಿದ್ದರು. ಮಿತಾಕ್ಷರವು ಯಾಜ್ಞವಲ್ಕ್ಯ ಸ್ಮೃತಿಯ 'ಭಾಷ್ಯೆ', ಯಾಜ್ಞವಲ್ಕ್ಯ ಸ್ಮೃತಿಯನ್ನು ಹಲವಾರು ಬಾರಿ, ಆಳವಾದ ಅಧ್ಯಯನಗೈದು, ಅಪಾರವಾದ ಜ್ಞಾನವನ್ನು ಪಡೆದಿದ್ದರು. ಅದಕ್ಕಾಗಿಯೇ ಅವರಿಗೆ ಗುರು ಯಾಜ್ಞವಲ್ಕ್ಯರ ಬಗೆಗೆ ವಿಶೇಷ ಅಭಿಮಾನ ಹಾಗೂ ಭಕ್ತಿ. ಅದಕ್ಕಾಗಿಯೇ ಕ್ರಿ.ಶ.1986 ಪೂರ್ವಾಶ್ರಮದಲ್ಲಿ ಬ್ರಾಹ್ಮಣ ಸಮಾಜದ ಅಧ್ಯಕ್ಷರಾಗಿದ್ದಾಗ ಪೇಜಾವರದ ಶ್ರೀ ವಿಶ್ವೇಶತೀರ್ಥರು, ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥರು, ರಾಯರ ಮಠದ ಶ್ರೀ ಸುಶಮೀಂದ್ರ ತೀರ್ಥರು, ಕೃಷ್ಣಾಪುರ ಮಠದ ಶ್ರೀ ವಿದ್ಯಾಸಾಗರ ತೀರ್ಥರು, ಫಲಿಮಾರು ಮಠದ ಶ್ರೀ ವಿದ್ಯಾಮಾನ್ಯ ತೀರ್ಥರು, ಶೃಂಗೇರಿ ಶಂಕರ ಮಠದ ಶ್ರೀ ನೃಸಿಂಹಭಾರತೀ ಸ್ವಾಮೀಜಿ ಹಾಗೂ ಶಿವಗಂಗಾ ಮಠದ ಪ್ರಮುಖರಿಗೆ, ಕಣ್ವಶಾಖೆಯ ಕುರಿತು ಸಮಾಜದಲ್ಲಿ ಬೆಳೆದುಬಂದಿರುವ ವಿವಾದಗಳಿಗೆ ಶಾಸ್ತ್ರೀಯವಾದ ಪುರಾವೆಗಳೊಂದಿಗೆ ವಿವರಣೆಯನ್ನು ತಿಳಿಸಿ, ಇಲ್ಲದಿದ್ದರೆ ಕಣ್ವಶಾಖೀಯರು ಶ್ರೇಷ್ಠರೆ ಎಂಬ ಮುಚ್ಚಳಿಕಾ ಪತ್ರವನ್ನು ಬರೆದು ಕಳುಹಿಸಿ ಎಂದು ಕೋರಿದ್ದರು. ಇವರ ಈ ಶ್ರಮಕ್ಕೆ ಪ್ರತಿಫಲವು ದೊರೆಯಿತು. ಎಲ್ಲಾ ಮಠಾಧೀಶರುಗಳು ಕೂಡಾ ಶುಕ್ಲಯಜುರ್ವೇದವು ಚತುರ್ವೇದದಲ್ಲೇ ಸಮ್ಮಿಳಿತವಾಗಿದೆ. ಶ್ರೀ ಯಾಜ್ಞವಲ್ಕ್ಯರು ಹಾಗೂ ಶ್ರೀ ಕಣ್ವರು ಶ್ರೇಷ್ಠ ಬ್ರಹ್ಮಜ್ಞಾನಿಗಳು. ಎಲ್ಲ ಬ್ರಾಹ್ಮಣರು ಸಹೋದರತ್ವದೊಂದಿಗೆ ಬಾಳಿದರೆ ಬ್ರಾಹ್ಮಣ್ಯತ್ವದ ರಕ್ಷಣೆಯಾಗುತ್ತದೆ ಎಂದು ತಿರುಗಿ ಪತ್ರವನ್ನು ಬರೆದು ಕಳುಹಿಸಿದ್ದರು. ಪತ್ರಗಳನ್ನು ಪಡೆದುಕೊಂಡರೂ ಅವರಿಗೆ ಸಮಾಧಾನವಾಗಲಿಲ್ಲ. "ನಾನಿನ್ನೂ ಸಾಧಿಸಬೇಕು, ಸಾಧಿಸಬೇಕು" ಎಂದು ಅಂತರಂಗದ ಒಳಧ್ವನಿ ಮಿಡಿಯುತ್ತಿತ್ತು.

'ಧನ್ಯೋ ಗೃಹಸ್ಥಾಶ್ರಮಿ' ಎಂಬಂತೆ ಸಹಧರ್ಮಿಣಿ ಸೌ॥ ಶಾಂತಾಬಾಯಿ ಯವರೊಂದಿಗೆ ಸುಖಮಯ ಸಂಸಾರಿಕ ಜೀವನ ನಡೆಸಿದ್ದರು. 4 ಜನ ಸುಪುತ್ರರು, 3 ಜನ ಸುಪುತ್ರಿಯರು, 10 ಜನ ಮೊಮ್ಮಕ್ಕಳು, 3 ಜನ ಮರಿಮೊಮ್ಮಕ್ಕಳೊಂದಿಗೆ ತುಂಬಿದ ಮನೆಯು ನಂದಗೋಕುಲದಂತಿತ್ತು. ಮನೆಯಲ್ಲಿ ತಮ್ಮ ಪರಿವಾರದ ಜೊತೆಗೆ ತಾಯಿ, ಸೋದರತ್ತೆ, ಸಹೋದರ, ಸಹೋದರಿಯರೊಳಗೊಂಡಂತೆ

“ವಸುದೇವ ಕುಟುಂಬಕಮ್” ಎಂಬ ಮಾದರಿಯ ಸಂಸಾರ ಇವರದಾಗಿತ್ತು. “ಸ್ವರ್ಗಕ್ಕೆ ಇನ್ನೇನು ಮೂರೇ ಗೇಣು” ಎನ್ನುವಷ್ಟು ಸುಖಮಯ ಸಂಸಾರಕ್ಕೆ ಒಡೆಯರಾಗಿದ್ದರು.

ಅಗರ್ಭ ಶ್ರೀಮಂತರಾಗಿದ್ದರೂ ಅಹಂಕಾರದ ಸುಳಿವು ಲೇಶ ಮಾತ್ರವೂ ಇರಲಿಲ್ಲ. ಸರಳ ಜೀವಿಗಳು, ಉದಾರಿಗಳು, ಅತಿಥಿ ಸತ್ಕಾರಕ್ಕೆ ಹೆಸರಾದ ಮನೆತನ. ಆಗಿನ ಕಾಲಕ್ಕೆ ಬದರಿ, ಕಾಶಿ, ರಾಮೇಶ್ವರಕ್ಕೆ ತೆರಳುವ ಉತ್ತರ ಕರ್ನಾಟಕದ ಯಾತ್ರಾರ್ಥಿಗಳೆಲ್ಲ ರಾಯಚೂರು ಮೂಲಕ ಹೈದ್ರಾಬಾದನಿಂದ ಪ್ರಯಾಣ ಬೆಳಸಬೇಕಾಗುತ್ತಿತ್ತು. ಆಗ ಯಾತ್ರಾರ್ಥಿಗಳಿಗೆಲ್ಲ ಇವರ ಮನೆಯೇ 'ತಂಗುದಾಣ'ವಾಗಿರುತ್ತಿತ್ತು.

ಕಣ್ವ ಮಠದ ಮುಖಂಡರಾಗಿ, ಅನುಯಾಯಿಗಳಾಗಿ ಸಮಾಜದ ಎಲ್ಲ ವರ್ಗದ ಜನರೊಂದಿಗೆ ಒಳ್ಳೆಯ ಸಂಬಂಧವನ್ನಿಟ್ಟುಕೊಂಡಿದ್ದರು. ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರೊಂದಿಗೆ ಒಳ್ಳೆಯ ಒಡನಾಟವನ್ನು ಇಟ್ಟುಕೊಂಡಿದ್ದರು. ಅವರು ಆಗಾಗ ಇವರ ಮನೆಗೆ ಭೇಟಿ ಕೊಡುತ್ತಿದ್ದರು.

“ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ” ಎನ್ನುವ ಈಶಾವಾಸ್ಯ ಉಪನಿಷತ್ ವಾಕ್ಯದಂತೆ ಸತ್ಕರ್ಮಾಚರಣೆಯೊಂದಿಗೆ ಸಂಸಾರಿಕ ಹಾಗೂ ಸಾಮಾಜಿಕ ಜೀವನವನ್ನು ಬಹು ಸಮರ್ಥವಾಗಿ ಹಾಗೂ ಸಾರ್ಥಕವಾಗಿಯೂ ಮಾಡಿಕೊಂಡಿದ್ದರು. ಭೌತಿಕವಾಗಿ ಸಂಸಾರದಲ್ಲಿದ್ದರೂ ಕೂಡಾ ಮನವೆಲ್ಲ ಮಠದ ಕಡೆಗೆ, ವೃತ್ತಿಯಿಂದ ನಿವೃತ್ತಿಯಾದ ಕೂಡಲೇ ಗೃಹಸ್ಥಾಶ್ರಮ ತ್ಯಜಿಸುವ ನಿರ್ಧಾರ ಕೈಗೊಂಡರು. ತಮ್ಮ 72ರ ಇಳಿವಯಸ್ಸಿನಲ್ಲಿ ಒಮ್ಮೆ ತೆರೆದ ಹೃದಯದ ಶಸ್ತ್ರ ಚಿಕಿತ್ಸೆ ಮತ್ತು ಆಶ್ರಮ ತೆಗೆದುಕೊಂಡ ಕೆಲವು ವರ್ಷಗಳ ನಂತರ ಮತ್ತೊಮ್ಮೆ ಹೃದಯದ ಶಸ್ತ್ರ ಚಿಕಿತ್ಸೆಗೆ ಒಳಗಾದರು. ಅರಮನೆಯಂತಹ ಮನೆಯಲ್ಲಿ ಸುಖವಾದ, ಶಾಂತವಾದ, ಆರೋಗ್ಯಕರವಾದ ಜೀವನವನ್ನು ಕಳೆಯು ಬಹುದಾಗಿತ್ತಾದರೂ ಅಂತರಂಗದಲ್ಲಿ ಮನೆಮಾಡಿಕೊಂಡಿದ್ದ ದುಃಖ, ದುಮ್ಮಾನಗಳು ಪುಟಿದೆದ್ದವು. ಕಣ್ವ ಸಮಾಜದ ಆತ್ಮ ಗೌರವವನ್ನು ಕಾಪಾಡಲೇಬೇಕು, ಅವರು ಅಭಿಮಾನದಿಂದ ಬಾಳುವಂತಾಗಲೇಬೇಕೆಂಬ ಪಣವನ್ನು ತೊಟ್ಟಿದ್ದರು. ತಮ್ಮ ಈ ಪಣವನ್ನು ಸತ್ಯವಾಗಿಸಲು ಗೃಹಸ್ಥಾಶ್ರಮದಲ್ಲಿ ಎಷ್ಟೇ ಕಷ್ಟಪಟ್ಟರೂ ಸಮಾಜವನ್ನು ಸುಧಾರಿಸಲಾಗಲಿಲ್ಲ. ಈ ಮಹತ್ಕಾರ್ಯ ತುರ್ಯಾಶ್ರಮದಿಂದಲೇ ಘಟಿಸುತ್ತದೆ, ಆ ಪೂಜನೀಯ ಸರ್ವಜ್ಞ ಪೀಠದಿಂದ ದಾಖಲಿಸುವ ಪುರಾವೆಗಳಿಗೆ ಮಹತ್ವ ಬರುತ್ತದೆ ಹಾಗೂ ಆ ವಾಕ್ಯಗಳಿಗೆ ಶ್ರೀ ವಿಠ್ಠಲಕೃಷ್ಣ ಮೊಹರು ಬೀಳಲೇಬೇಕೆಂದು ಈ ಭೀಷ್ಮ ನಿರ್ಧಾರ ಕೈಗೊಂಡರು.

“ಸಾಧಕರಲ್ಲಿ ಸರ್ವೋತ್ತಮ” ಎನ್ನುವಂತೆ ತ್ರಿಕಾಲಜ್ಞಾನಿ ಭಗವಂತನ ಸಂಕಲ್ಪವೂ ಕೂಡ ಹೀಗೆಯೇ ಇರಲೇಬೇಕು. ಏಕೆಂದರೆ ಇಂತಹ ಮಹತ್ಕಾರ್ಯ 'ದೇವರು' ಮನೆತನದ ಪ್ರಬಲಶಾಲಿ ಜ್ಞಾನಿಯಿಂದಲೇ ಘಟಿಸುತ್ತದೆ ಎಂದು ತಿಳಿದಂತೆ, ಗುರು

ಪರಂಪರೆಯ ಎಲ್ಲಾ ಮಹಾನ್ ಯತಿವರ್ಯರ ಕಾರುಣ್ಯ ಕೃಪೆಯ ಅಭಯ ದೊರಕಿದ್ದರಿಂದಲೇ ಅಪೇಕ್ಷೇ ಈಡೇರುವಂತಾಯಿತು. ಹೌದು! ಶ್ರೀ ವಿದ್ಯಾಭೂಷಣತೀರ್ಥ ಶ್ರೀಪಾದಂಗಳವರ ಆರೋಗ್ಯ ಕ್ಷೀಣಿಸಿ, ಅಂತ್ಯಕಾಲ ಸಮೀಪಿಸಿದಾಗ ಶ್ರೀ ಶ್ರೀನಿವಾಸಪ್ಪಯ್ಯ ದೇವರು ಅವರಿಗೆ 'ಕಾಯಿ' ಹಸ್ತಾಂತರಿಸಿದರು.

ಶಾಲಿವಾಹನ ಶಕೆ 1915 ಶ್ರೀಮುಖನಾಮ ಸಂವತ್ಸರದ ಶ್ರಾವಣ ಬಹುಳ ಬಿದಿಗೆ, ದಿನಾಂಕ: 3.8.1993 ಬುಧುವಾರದಂದು "ಶ್ರೀನಿವಾಸಪ್ಪಯ್ಯ ತಿಮ್ಮಪ್ಪಯ್ಯ ದೇವರು" ಶ್ರೀ ಶ್ರೀ 1008 ಶ್ರೀ ವಿದ್ಯಾಭೂಷಣ ತೀರ್ಥ ಶ್ರೀಪಾದಂಗಳವರಿಂದ ಯತ್ಯಾಶ್ರಮವನ್ನು ಸ್ವೀಕರಿಸಿ "ಶ್ರೀ ವಿದ್ಯಾಭಾಸ್ಕರ ತೀರ್ಥ" ರೆಂದು ನಾಮಾಭಿದಾನದಿಂದ ಕಣ್ವ ಸರ್ವಜ್ಞ ಪೀಠದ ಸಾರಥ್ಯ ವಹಿಸಿದರು.

ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥರು ಸೂಚಿಸಿದ 'ವಿದ್ಯಾಭಾಸ್ಕರ' ದಿವ್ಯನಾಮವು, ಬೇಸಿಗೆಯ ಭಾಸ್ಕರನು ಸೂಸುವ ಪ್ರಖರವಾದ ಕಿರಣಗಳಂತೆ ಪ್ರಜ್ವಲಿಸಿತು. ಸಿರಿಯ ತೊರೆದು ಸಿರಿಲೋಲನ ಭಕ್ತರ ಉದ್ಧಾರಕ್ಕಾಗಿ ಟೊಂಕ ಕಟ್ಟಿ ನಿಂತರು. ಯತಿದೀಕ್ಷಾ ಕಾರ್ಯಕ್ರಮಗಳೆಲ್ಲವೂ ಬೆಂಗಳೂರಿನ ಜಾಲಹಳ್ಳಿ ಗಣೇಶ ಮಂದಿರ ಕಲ್ಯಾಣ ಮಂಟಪದಲ್ಲಿ ಜರುಗಿದವು. ಶ್ರೀಕ್ಷೇತ್ರ ಮೂಲಮಠ ಹುಣಸಿಹೊಳೆಯ ಪುರಪ್ರವೇಶ ಕಾರ್ಯಕ್ರಮಗಳೆಲ್ಲವು ಸುರಪುರ, ತಿಂತಣಿ, ಸಾನಬಾಳ, ಕಾಮನಟಗಿ ಭಕ್ತರೊಂದಿಗೆ ಸುರಪುರದ ಅರಸ ರಾಜಾ ವೆಂಕಟಪ್ಪ ನಾಯಕ (ತಾತಾ) ಇವರ ನೇತೃತ್ವದಲ್ಲಿ ಬಹು ವಿಜೃಂಭಣೆಯಿಂದ ಜರುಗಿದವು. ಯಾವುದೇ ತರಹದ ಮೂಲಭೂತ ಸೌಕರ್ಯವಿರದ ಹುಣಸಿಹೊಳೆಯ ಮೂಲಮಠವನ್ನೇ ತಮ್ಮ ಸಾಧನೀಯ ಕ್ಷೇತ್ರವನ್ನಾಗಿ ಮಾಡಿಕೊಂಡು, ತಮ್ಮ ಉಸಿರುರುವವರೆಗೂ ಪಂಚ ವೃಂದಾವನ ಗಳಿರುವ ಈ ಪಾವನ ಕ್ಷೇತ್ರವನ್ನೇ ಸ್ವರ್ಗವೆಂದು ಬಗೆದು, ಶ್ರೀ ವಿಠ್ಠಲಕೃಷ್ಣನ ಪೂಜೆ, ಸತತ ಅಧ್ಯಯನ ಹಾಗೂ ಶ್ರೀಮಠಕ್ಕೆ ಬಂದಂತಹ ಭಕ್ತರಿಗೆ ಅಧ್ಯಾಪನಗೈಯುತ, ತಮ್ಮ ಕಾಯಕದಲ್ಲಿ ಕೈಲಾಸವನ್ನು ಕಂಡರು.

ಭಾಗವತ ತಿಳಿಸುವಂತೆ ಒಬ್ಬ ಅವಧೂತ ಮಾರ್ಗೀಯು ವಿಧಿನಿಷೇಧಗಳನ್ನು ಮೀರಿದವನಾಗಿರುತ್ತಾನೆ. ಅವನಿಗೆ ಯಾವುದೇ ತರಹದ ಕಟ್ಟಳೆಗಳಿಲ್ಲ, ದಾಸರ ನುಡಿಯಲ್ಲಿ ಸುಲಭವಾಗಿ ಹೇಳುವುದಾದರೆ, 'ಸರ್ವ ದೇಶವು ಪುಣ್ಯದೇಶವು, ಸರ್ವಕಾಲವು ಪರ್ವಕಾಲವು, ಸರ್ವ ಜೀವರು ದಾನಪಾತ್ರರು, ಸರ್ವವಂದ್ಯನ ಧ್ಯಾನವುಳ್ಳವರಿಗೆ" ಅಂತೆಯೇ ಶ್ರೀಪಾದರು ಕೂಡ ಮೂರ್ತಿ ಪೂಜೆಯಲ್ಲಷ್ಟೇ ಶ್ರೀ ವಿಠ್ಠಲಕೃಷ್ಣನನ್ನು ಕಾಣದೇ ಸಂಪೂರ್ಣ ಕಣ್ವಶಾಖೀಯ ಭಕ್ತರಲ್ಲೇ ಶ್ರೀ ವಿಠ್ಠಲಕೃಷ್ಣನನ್ನು ಕಂಡರು. ಶ್ರೀ ಮಠದ ಅಭಿವೃದ್ಧಿಯೇ ಭಗವಂತನಿಗೆ ಅರ್ಪಿಸುವ ಅರ್ಚನೆ, ಗುರುಪರಂಪರೆಯ ಜ್ಞಾನ ಪ್ರಸಾರವೇ ಅವನಿಗರ್ಪಿಸುವ ನೈವೇದ್ಯ ಎಂಬ ಭಾವವಿರುವ ಅವರ ಆಲೋಚನಾ ಶಕ್ತಿ ಬಹಳ ಆಳವಾಗಿತ್ತು. ಅಭಿವೃದ್ಧಿ ಬಗೆಗೆ ದೂರದೃಷ್ಟಿ ಉಳ್ಳವರಾಗಿದ್ದರು. ಅಂತೆಯೇ ಶ್ರೀಮಠವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಅಭಿವೃದ್ಧಿಪಡಿಸಲು ಪಣತೊಟ್ಟರು.

ನಿರ್ಧಾರ ಧೃಡವಾಗಿತ್ತು, ಸಂಕಷ್ಟಗಳೆಂಬ ಗಂಟುಗಳಿಂದ ಕೂಡಿದ ಸರಮಾಲೆಯ ಒಂದೊಂದೇ ಗಂಟುಗಳನ್ನು ಬಿಡಿಸತೊಡಗಿದರು.

ಅರ್ಥವೇ ಅಭಿವೃದ್ಧಿಗೆ ಮೂಲ ಎಂಬ ತತ್ವದಲ್ಲಿ ನಂಬಿಕೆಯಿಟ್ಟು ಶ್ರೀಮಠವನ್ನು ಆರ್ಥಿಕವಾಗಿ ಸುಧಾರಿಸಲು ಆಲೋಚಿಸಿದರು. ಶ್ರೀಮಠದ ಜಮೀನಿನ ಮೇಲಿದ್ದ ವ್ಯಾಜ್ಯಗಳನ್ನು ಬಗೆಹರಿಸಲು ಆಲೋಚಿಸಿದರು. ಪೂರ್ವಾಶ್ರಮದಲ್ಲಿ ತಾವೇ ಸ್ವತಃ ನ್ಯಾಯವಾದಿಗಳಾಗಿದ್ದರಿಂದ, ಕಾನೂನಿಗೆ ಸಂಬಂಧಿಸಿದ ಅಡೆತಡೆಗಳನ್ನು ನಿವಾರಿಸಿದರು. 108 ಎಕರೆ ಜಮೀನನ್ನು ವ್ಯಾಜ್ಯದಿಂದ ಮುಕ್ತ ಮಾಡಿದರು. ಒಣ ಬೇಸಾಯದ ಜಮೀನನ್ನು ನೀರಾವರಿಯಾಗಿ ಮಾಡಲು ಆಲೋಚಿಸಿ, ದೇಶದಲ್ಲಿ ದೊರೆಯುವ ಉತ್ಕೃಷ್ಠ ಬಗೆಯ ಪಂಪಸೆಟ್ಟುಗಳು ಹಾಗೂ ಕೊಳವೆಗಳಿಂದ ನೀರನ್ನು ಹರಿಸಿದರು. ಬರಡು ಭೂಮಿಗೆ ಜೀವ ಕಳೆ ತುಂಬಿ ಹಚ್ಚಹಸುರಿನಿಂದ ಕಂಗೊಳಿಸುವಂತೆ ಮಾಡಿದರು. ಒಣ ಭೂಮಿಗಳು ಭತ್ತದ ಕಣಜಗಳಾದವು. 1000 ಚೀಲ ಭತ್ತವನ್ನು ಸುಲಭವಾಗಿ ಬೆಳೆಯುವಂತೆ ಮಾಡಿದರು. 3 ಎಕರೆ ಜಮೀನನ್ನು ಮಾವಿನ ತೋಟವನ್ನಾಗಿ ಮಾರ್ಪಡಿಸಿ ಶ್ರೀಮಠಕ್ಕೆ ಉತ್ಪನ್ನ ಬರುವ ಹಾಗೆ ಮಾಡಿದರು. ಭಕ್ತರ ದೇಣಿಗೆಯಿಲ್ಲದಿದ್ದರೂ ಸಹಿತ ಶ್ರೀಮಠದ ಅಭಿವೃದ್ಧಿಯ ಕಾರ್ಯಗಳೆಲ್ಲವೂ ಕುಂಠಿತಗೊಳ್ಳದೇ ನಿರಂತರವಾಗಿ ಮುಂದುವರೆಯುತ್ತಿರಲೇಬೇಕೆಂದು ಶ್ರೀಮಠಕ್ಕೆ ಸ್ಥಿರ ಆಸ್ತಿ ಮಾಡಿ ಶ್ರೀಮಠವನ್ನು ಆರ್ಥಿಕವಾಗಿ ಸಬಲಗೊಳಿಸಿದರು.

80ರ ಇಳಿವಯಸ್ಸಿನಲ್ಲಿ ಇಪ್ಪತ್ತರ ಯುವಕನಂತೆ ಓಡಾಡಿ, ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿ ಶ್ರೀಮಠದ ಇತಿಹಾಸವನ್ನು ತಿಳಿಸಿ ಯಾತ್ರಿನಿವಾಸಕ್ಕಾಗಿ ಹಣ ಬಿಡುಗಡೆಗೊಳಿಸಿದರು. ಇಂದು ನಾವು ನೋಡುತ್ತಿರುವ ಶ್ರೀಕ್ಷೇತ್ರಗಳಾದ ಬುದ್ಧಿನ್ನಿ, ಅಮ್ಮನಕಟ್ಟೆ ಹಾಗೂ ಹುಣಸಿಹೊಳೆಯಲ್ಲಿರುವ ಭವ್ಯವಾದ ಯಾತ್ರಿನಿವಾಸಗಳು ಇವರ ಶ್ರಮದ ಫಲ. ನೂರಕ್ಕೂ ಹೆಚ್ಚು ಕಟುಕರ ಗೋವುಗಳನ್ನು ಸಾವಿನ ದವಡೆಯಿಂದ ಪಾರು ಮಾಡಿದರು, ಅವುಗಳನ್ನು ಸಂರಕ್ಷಿಸಲು ಶ್ರೀಮಠದ ಆವರಣದಲ್ಲೇ ಗೋಶಾಲೆಯನ್ನು ಮಾಡಿ ಗೋಪ್ರೀಯ ವಿಠ್ಠಲಕೃಷ್ಣನಿಗೆ ಕ್ಷೀರಾಭಿಷೇಕ ಮಾಡಿದರು. ಹುಣಸಿಹೊಳೆಯಲ್ಲಿದ್ದ ಪುರಾತನವಾದ ಪುಷ್ಕರಣಿಯನ್ನು ಜೀರ್ಣೋದ್ಧಾರಗೊಳಿಸಿ ಕೃಷ್ಣಾ ನದಿಯಿಂದ ನೀರು ಹರಿಸಿ, ಅದನ್ನು ಅಭಿವೃದ್ಧಿಗೊಳಿಸಿ "ಕಣ್ವತೀರ್ಥ"ವನ್ನು ಮಾಡಿ ಗುರುಗಳಾದ ಶ್ರೀ ವಿದ್ಯಾತಪೋನಿಧಿ ತೀರ್ಥರ ಕನಸನ್ನು ನನಸಾಗಿಸಿ, ಅವರ ಪಾದಪದ್ಮಗಳಿಗೆ ಜಲಾಭಿಷೇಕ ಮಾಡಿದರು.
ನಂತರ ಕಣ್ವಶಾಖೀಯರ ಆತ್ಮ ಗೌರವವನ್ನು ಹೆಚ್ಚಿಸಲು ತಾವು ಪೂರ್ವಾಶ್ರಮದಲ್ಲಿ ಹಗಲಿರುಳು ಯೋಚಿಸುತ್ತಿದ್ದ ಆಲೋಚನೆಗಳನ್ನು, ಕನಸುಗಳನ್ನು ಸಾಕಾರಗೊಳಿಸಲು ನಿರ್ಧರಿಸಿದರು.

ತಮ್ಮ ಸಮಾಜ ಬ್ರಾಹ್ಮಣರಲ್ಲವೆಂಬ ನಿಲುವು ತಳೆದ ಇತರ ಸಂಪ್ರದಾಯದವರಿಗೆ ಶ್ರೀ ಯಾಜ್ಞವಲ್ಕ್ಯರು ಹಾಗೂ ಶ್ರೀ ಕಣ್ವ ಋಷಿಗಳು ಶ್ರೇಷ್ಠ ಬ್ರಹ್ಮರ್ಷಿಗಳು ಹಾಗೂ ವಿಶ್ವಮಾನ್ಯ ಗುರುಗಳು ಎಂದು ಸಾಬೀತುಪಡಿಸಲು ಪುರಾಣಗಳ ಖನನ ಮಾಡಿದರು.

(1) ತಿರುಚದೆ ಇರುವ ಮೂಲಭಾಗವತ, (2) ಆದಿತ್ಯ ಪುರಾಣ, (3) ಮಂಡಲ ಬ್ರಾಹ್ಮಣೋಪನಿಷತ್, (4) ಭವಿಷತ್ ಪುರಾಣದ ಮೊದಲನೆಯ ಭಾಗ, 66ನೇ ಅಧ್ಯಾಯ, (5) ಸನ್ಯಾಸಗೀತಾ, (6) ಮಹಾಭಾರತದ ಸಭಾಪರ್ವ 7ನೇಯ ಅಧ್ಯಾಯ 12ನೇ ಶ್ಲೋಕ ಹಾಗೂ 33ನೇಯ ಅಧ್ಯಾಯ 15ನೇ ಶ್ಲೋಕ, (7) ಬೃಹದಾರಣ್ಯಕ ಮಧ್ವ ಭಾಷ್ಯೆ ಶಾಕಲ್ಯ ಬ್ರಾಹ್ಮಣ, (8) ಬೃಹದಾರಣ್ಯಕೋಪನಿಷತ್ ಮುನಿಖಂಡ, (9) ಜಾಬಾಲಿ ಉಪನಿಷತ್ 1ನೇಯ ಅಧ್ಯಾಯ 1ನೇ ಶ್ಲೋಕ, (10) ರಾಮಚರಿತ ಮಾನಸ ಭಾರದ್ವಾಜ ಯಾಜ್ಞವಲ್ಕ್ಯ ಸಂವಾದ, (11) ಬ್ರಹ್ಮ ವೈವರ್ತ ಪುರಾಣ, (12) ವಾಯು ಪುರಾಣ, (13) ಸ್ಕಂದ ಪುರಾಣ ಇತ್ಯಾದಿ ಮಹಾಗ್ರಂಥಗಳನ್ನು ಅಧ್ಯಯನಗೈದು ವಿಷಯಗಳನ್ನು ಸಂಗ್ರಹಿಸಿದರು. ಸಂಸ್ಕೃತ ಪಂಡಿತರೊಡನೆ ಹಗಲಿರುಳು ಚರ್ಚಿಸಿದರು. ಕೊನೆಗೆ ಸಮಾಜಕ್ಕೆ ದಾಖಲೆ ಸಮೇತ ಪುರಾವೆ ಗಳನ್ನು ತೋರಿಸಿ ಗುರುಗಳ ಘನತೆಯನ್ನು ಎತ್ತಿ ಹಿಡಿಯುವಲ್ಲಿ ಸಫಲರಾದರು. ಅವರ ಭಗೀರಥ ಪ್ರಯತ್ನ ಸಾಕಾರಗೊಂಡಿತು. ಈ ಕೆಳಗಿನ ವಿಷಯಗಳಿಂದ ಕಣ್ವ ಋಷಿಗಳು ಶ್ರೇಷ್ಠರೆಂದು ಬಿಂಬಿಸಿದರು.

1) ಕಣ್ವ ಋಷಿಗಳು ಶ್ರೀ ಕೃಷ್ಣ ಪರಮಾತ್ಮನಿಗೆ ಅತ್ಯಂತ ನಿಕಟವರ್ತಿಗಳು ಹಾಗೂ ಪೂಜ್ಯರು ಆಗಿದ್ದರೆಂದು ಭಾಗವತದ 10ನೇಯ ಸ್ಕಂದ 86ನೇಯ ಅಧ್ಯಾಯದಲ್ಲಿ ಉಲ್ಲೇಖವಾಗಿದೆ.

2) ಕಣ್ವರನ್ನು ಬ್ರಹ್ಮದೇವರು ತಾವು ಆಚರಿಸಿದ ಯಜ್ಞದಲ್ಲಿ ಋತ್ವಿಜರನ್ನಾಗಿ ಮಾಡಿಕೊಂಡಿದ್ದರೆಂದು ವಾಯುಪುರಾಣದ 108ನೇ ಅಧ್ಯಾಯ 35ನೇಯ ಶ್ಲೋಕದಲ್ಲಿ ಉಲ್ಲೇಖವಿದೆ.

3) ಋಗ್ವೇದದ ಮೊದಲನೆಯ ಮಂಡಲ 36ನೇಯ ಸೂಕ್ತ, 16ನೇಯ ಮಂತ್ರದಲ್ಲಿ ಮಂತ್ರದೃಷ್ಠಾರ ಗುರುಗಳು ಕಣ್ವರು ಮತ್ತು ಮೇಧಾತಿಥಿ ಕಣ್ವರು ಅಗ್ನಿದೇವರ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾದರೆಂಬ ಉಲ್ಲೇಖಗಳಿವೆ. ಋಗ್ವೇದದ ಅನೇಕ ಕಡೆಗಳಲ್ಲಿ ಕಣ್ವರನ್ನು 'ಅಗ್ನಿಸಖ'ವೆಂದು ಹಾಗೂ ಇಂದ್ರನಿಗೆ 'ಕಣ್ವಮಂತ' ವೆಂದು ಕರೆದಿರುವರು.

4) ಮಹಾಭಾರತದ ವನಪರ್ವದಲ್ಲಿ ವೇದವ್ಯಾಸರು ಕಣ್ವಶಾಖೆಗಳ ಆಶ್ರಮದ ಬಗ್ಗೆ ಧರ್ಮಾರಣ್ಯ ವೆಂದು ಹಾಗೂ ಲೋಕಪೂಜಿತನೆಂದು ಹೇಳುತ್ತಾ, ಅಲ್ಲಿ ಪ್ರವೇಶ ಮಾತ್ರದಿಂದಲೇ ಮನುಷ್ಯನು ಸಕಲ ಪಾಪಗಳಿಂದ ಮುಕ್ತನಾಗುತ್ತಾನೆ ಎಂದು ಬಣ್ಣಿಸಿದ್ದಾರೆ. ಅಷ್ಟೇ ಅಲ್ಲ ಈ ಆಶ್ರಮದ ಮೇಲೆ ಸಾಕ್ಷಾತ್ ಲಕ್ಷ್ಮೀ ದೇವಿಯ ಸಂಪೂರ್ಣ ಅನುಗ್ರಹವಿತ್ತೆಂದು ಮಹಾಭಾರತದ ವನಪರ್ವದ ಅಧ್ಯಾಯ 87, ಶ್ಲೋಕ 45, 46 ರಲ್ಲಿ ಉಲ್ಲೇಖವಾಗಿದೆ.

5) ಕಣ್ವರು ಸ್ಮೃತಿಕರ್ತರು, ಮಂತ್ರ ದೃಷ್ಟಾರರು, ಅವರು ಕಂಡುಕೊಂಡ ಎಲ್ಲಾ ಮಂತ್ರಗಳಿಗೆ ಆಚಾರ್ಯ ಮಧ್ವರು ಭಾಷ್ಯೆ ಬರೆದಿದ್ದಾರೆ ಹಾಗೂ ಸುಮಧ್ವ ವಿಜಯದಲ್ಲಿ ಅವರ ಉಚ್ಚ ಸ್ಥಾನದ ಬಗೆಗೆ ವಿವರಣೆಯನ್ನು ನೀಡಿದ್ದಾರೆ.

6) ಶ್ರೀ ಮಧ್ವಾಚಾರ್ಯರ ಭಕ್ತಿ ಕಣ್ವರ ಮೇಲೆ ಎಷ್ಟಿತ್ತೆಂಬುದನ್ನು ಈ ಕೆಳಗಿನ ವಿಷಯಗಳಿಂದ ತಿಳಿಯುತ್ತದೆ. ಹೌದು! ಉಡುಪಿಯ ಹತ್ತಿರದಲ್ಲಿರುವ ಪರಶುರಾಮ, ಗದಾ, ಶರಾದಿ ತೀರ್ಥಗಳನ್ನು ಬಿಟ್ಟು ಕಣ್ವತೀರ್ಥಕ್ಕೆ ಹೋಗಿ ಹದಿನಾರು ಜನ ಯತಿಶ್ರೇಷ್ಠರಿಗೆ ಆಶ್ರಮವಿತ್ತಿದ್ದು ಮತ್ತು ಈಗಲೂ ಉಡುಪಿಯ ಅಷ್ಟಮಠದ ಪ್ರತಿಯೊಬ್ಬ ಯತಿಗಳು ಪರ್ಯಾಯ ಪೀಠವನ್ನು ಅಲಂಕರಿಸುವಾಗ ಮತ್ತು ಯತ್ಯಾಶ್ರಮವನ್ನು ಸ್ವೀಕರಿಸುವಾಗ ಈ ಕಣ್ವತೀರ್ಥದಲ್ಲಿಯೇ ತೀರ್ಥವಿಧಿಯನ್ನು ಪೂರೈಸುವ ಅವಿಚ್ಛಿನ್ನ ಸಂಪ್ರದಾಯವಿದೆ.

7) ಶ್ರೀ ಮಜ್ಜಯತೀರ್ಥರು ಕೂಡಾ ಈಶಾವಾಸ್ಯ ಉಪನಿಷತ್ತಿಗೆ ಟೀಕೆಯನ್ನು ಬರೆಯುವಾಗ ಮೀಮಾಂಸಾಶಾಸ್ತ್ರ ರೀತ್ಯಾ ಮೊದಲಿಗೆ ತಮ್ಮ ಗುರುವಂದನೆ ಕಾಲಕ್ಕೆ ಕಾಣ್ವೋನಿಷತ್ ಯಥಾವತ್ ವ್ಯಾಕರಿಷ್ಯನ್ ಎಂದು ಮಂಗಲಶ್ಲೋಕವನ್ನು ರಚಿಸಿ ಕಣ್ವರಿಗೆ ಗೌರವವನ್ನು ಸಲ್ಲಿಸಿದ್ದಾರೆ.

8) ಕಣ್ವರ ಬಗ್ಗೆ ಮಂತ್ರಾಲಯದ ಪ್ರಭುಗಳಾದ ಶ್ರೀ ರಾಘವೇಂದ್ರ ಸ್ವಾಮಿಗಳು ತಮ್ಮ ದಶೋಪನಿಷತ್ ಖಂಡಾರ್ಥದಲ್ಲಿ ಶ್ರೇಷ್ಠತೆಯ ಬಗೆಗೆ ಉಲ್ಲೇಖಿಸಿದ್ದಾರೆ. ಇನ್ನೂ ಕಣ್ವರ ಗುರುಗಳಾದ ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ ಗುರುಗಳ ಬಗೆಗಿನ ವಿಷಯಗಳನ್ನು ಈ ರೀತಿ ಉಲ್ಲೇಖಿಸಿರುವರು.

ಶ್ರೀಮನ್ ಸೂರ್ಯನಾರಾಯಣನನ್ನು ಸಾಕ್ಷಾತ್ಕರಿಸಿಕೊಂಡು, ಯೋಗೀಶ್ವರನೆಂದೆನಿಸಿಕೊಂಡ, ಬ್ರಹ್ಮಾಂಶ ಸಂಭೂತರಾದ ಶ್ರೀ ಯಾಜ್ಞವಲ್ಕ್ಯರ ಬಗೆಗೆ ಗೌತಮ ಋಷಿಗಳೇ "ಯಥಾಮತಿ ಪ್ರವಕ್ಷ್ಯಾಮಿ" ಮತ್ತು ಯಸ್ಯ ಸ್ಮರಣ ಮಾತ್ರೇಣ ಸುಲಭಸ್ತತ್ವ ನಿಶ್ಚಯ! ಎಂಬುದಾಗಿ ಹೇಳಿದ ಮೇಲೆ ಹುಲುಮಾನವರಾದ ನಾವು ಅವರ ಬಗ್ಗೆ ಬರೆಯಲು ಎಷ್ಟು ಶಕ್ತರು ? ಆಚಾರ್ಯತ್ರಯರು ಈಶಾವಾಸ್ಯ, ಬೃಹದಾರಣ್ಯಕ ಭಾಷ್ಯಗಳಲ್ಲಿ ಯೋಗೀಶ್ವರರನ್ನು ಎಷ್ಟು ಉಚ್ಚ ಮಟ್ಟದಲ್ಲಿ ಕಂಡಿದ್ದಾರೆ ಎಂಬುದನ್ನು ಭಾಷ್ಯಗಳನ್ನು ಅಧ್ಯಯನ ಮಾಡಿದವರಿಗೆ ತಿಳಿಯುತ್ತದೆ ಎಂದು ಹೇಳಿದ್ದಲ್ಲದೆ ಪುರಾಣಗಳು ಅವರನ್ನು ಯಾವ ರೀತಿ ಹೊಗಳಿದ್ದಾರೆ ಎಂಬುದನ್ನು ಈ ರೀತಿ ತಿಳಿಯಪಡಿಸಿದರು.

ಶ್ರೀಮನ್ ಸೂರ್ಯನಾರಾಯಣನಿಂದ ವೇದವನ್ನು ಪಡೆದುದುಲ್ಲದೆ, ಸ್ವರ್ಗಲೋಕಕ್ಕೂ, ಆದಿತ್ಯ ಲೋಕಕ್ಕೂ ಹೋಗಿ ಸೂರ್ಯ ದೇವನಲ್ಲಿ ಆತ್ಮಜ್ಞಾನ ಪಡೆದವರು. ದೇವೇಂದ್ರನ ಸಭೆಗೆ ಆಗಾಗ ಹೋಗಿ ಬರುವವರು. ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮದೇವರಲ್ಲಿ ಸಂವಾದ ಮಾಡುವಾಗ ಬ್ರಹ್ಮದೇವರಿಂದ ಮಹಾಮತೇ, ದ್ವಿಜಶ್ರೇಷ್ಠರೆಂದು ಸಂಬೋಧಿಸಿಕೊಂಡವರು. ಶ್ರೀ ಶಂಕರಾಚಾರ್ಯರಿಂದ ಸರ್ವಜ್ಞರೆಂದು ಪ್ರಾರ್ಥಿಸಿಕೊಂಡವರು, ಯುಧೀಷ್ಠರನ ರಾಜಸೂಯ ಯಾಗದಲ್ಲಿ ಅಧ್ವೈರ್ಯ ಸ್ಥಾನವನ್ನು ಪಡೆದವರು. ಜನಕನ ಜ್ಞಾನಸತ್ರದಲ್ಲಿ ಸಕಲ ವಿದ್ವಾಂಸರನ್ನು ಗೆದ್ದು ಬ್ರಹ್ಮಿಷ್ಠರೆಂದು ಕರೆಸಿಕೊಂಡವರು, ಶ್ರೀ ಕೃಷ್ಣ ಪರಮಾತ್ಮನಿಂದ ಋಷಿ ಯೋಗೀಶ, ಮಹಾತ್ಮ, ಮಹಾತೇಜ ಇತ್ಯಾದಿ ನಾಮಗಳಿಂದ

ಸಂಬೋಧಿಸಿಕೊಂಡವರು, ದೇವತೆಗಳಿಗೂ, ಮಾನವರಿಗೂ ಗುರುಗಳಾದ ಬೃಹಸ್ಪತಿಗಳಿಗೂ ಗುರುಗಳಾದವರು, ಭಾರದ್ವಾಜರಿಗೆ ತತ್ತ್ವೋಪದೇಶ ಮಾಡಿದವರು. ಆತ್ರೇಯರಿಗೆ ಗುರುಗಳು, ಋಗ್ವೇದಿಗಳಿಗೆ ಪರಮ ಗುರುಗಳು ಎಂದು ದಾಖಲೆ ಸಮೇತ ರುಜುವಾತುಪಡಿಸಿದರು.

ಇಷ್ಟೆಲ್ಲ ಪುರಾವೆಗಳನ್ನು ಒದಗಿಸಿದರೂ ಸಹ ಕೆಲವರು ಸಂಪ್ರದಾಯದ ಮುಸುಕಿನಲ್ಲಿ ನಿಂದಿಸುತ್ತಿರುವವರಿಗೂ ಹಿತವಚನಗಳನ್ನು ನೀಡಿದರು. ಏನೆಂದರೆ, ಬ್ರಹ್ಮವೈವರ್ತ ಪುರಾಣದಲ್ಲಿ ಸ್ವೋತ್ತಮರ ನಿಂದೆ ಮಾಡಿ ಅವರ ಕೀರ್ತಿಗೆ ಹಾನಿ ಮಾಡಿದರೆ ಮುಂದೆ ಬಹಳ ಕೆಟ್ಟ ಪರಿಣಾಮ ಗಳನ್ನು ಅನುಭವಿಸಬೇಕಾಗುತ್ತದಲ್ಲದೆ, ಅಂಧಕೂಪದಂತಹ ನರಕ ಪ್ರಾಪ್ತಿಯಾಗುತ್ತದೆ ಎಂಬುದನ್ನು 22ನೇಯ ಅಧ್ಯಾಯದಲ್ಲಿ ಬಿಂಬಿಸಿರುವುದನ್ನು ವಿಸ್ತಾರವಾಗಿ ತಿಳಿಸಿದರು.

ಇನ್ನು ನಮ್ಮ ಕಣ್ವ ಸಮಾಜದ ಜನರು ಈ ತರಹದ ಶಬ್ದಗಳನ್ನು ಕೇಳಿ ನೊಂದುಕೊಂಡವರಿಗೂ ಕೆಲವೊಂದು ಉಪದೇಶಗಳನ್ನು ಹೀಗೆ ಮಾಡಿದರು. ಹಿಂದೆ ಪುರಾಣಗಳಲ್ಲಿ ಶಾಪ–ವಿಶಾಪಗಳು ಕಥೆಗಳು ಬಂದಿಲ್ಲವೇ? ಬಹಳಷ್ಟು ಬಂದಿವೆ, ಅವುಗಳ ಹಿಂದಿನ ರಹಸ್ಯ, ಭಗವಂತನ ಸಂಕಲ್ಪವೇ ಬೇರೆಯಾಗಿರುತ್ತದೆ. ಅವುಗಳು, ಜ್ಞಾನಿಗಳ ಸಜ್ಜನರ ಉದ್ಧಾರಕ್ಕಾಗಿಯೇ ಹೊರತು ಅಪಾರ್ಥ ಮಾಡಿಕೊಳ್ಳಬಾರದು. ಪುರಾಣದಲ್ಲಿರುವ ಇಂತಹ ಸಂದಿಗ್ಧ ಪರಿಸ್ಥಿತಿಗಳನ್ನು, ಬಿಕ್ಕಟ್ಟುಗಳನ್ನು ಶ್ರೀ ಮಧ್ವಾಚಾರ್ಯರು ತಮ್ಮ "ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ" ಬಿಡಿಸಿ ಹೇಳಿದ್ದಾರೆ. ಅವುಗಳ ಹಿಂದಿರುವ ಮರ್ಮಗಳನ್ನು ತಿಳಿಸಿ ಹೇಳಿಲ್ಲವೇ? ಶಾಪಕ್ಕೆ ಗುರಿಯಾದ ದೇವತೆಗಳನ್ನು ಪೂಜಿಸುವುದು ಬಿಟ್ಟದ್ದೇವೆಯೇ? ಸ್ವರ್ಗಾಧಿಪತಿ ಇಂದ್ರನಿಗೂ ಶಾಪ ತಟ್ಟಿಲ್ಲವೇ? ಹಾಗಂತೆ ಇಂದ್ರ ದೇವರನ್ನು ಪೂಜಿಸುವುದು ಬಿಟ್ಟಿಲ್ಲ. ಈ ತರಹದ ಸನ್ನಿವೇಶಗಳು ಬಹಳಷ್ಟಿವೆ ಎಂದ ಮೇಲೆ ನಮ್ಮ ಗುರುಗಳ ಬಗೆಗೆ ತಾರತಮ್ಯವೇಕೆ? ನಮ್ಮ ಗುರುಗಳ ಒಂದು ಕಹಿ ಘಟನೆಯಿಂದಲೇ ಶುಕ್ಲ ಯಜುರ್ವೇದ, ಈಶಾವಾಸ್ಯ, ಬೃಹದಾರಣ್ಯಕದಂತಹ ಉಪನಿಷತ್ತುಗಳಂತಹ ಮುತ್ತು ರತ್ನಗಳು ಹೊರಹೊಮ್ಮಿದವು. "ಈಶಾವಾಸ್ಯ" ಆಧ್ಯಾತ್ಮಿಕ ಪ್ರಪಂಚದ ಜ್ಞಾನದ ಖಣಿಯಾದರೆ, ಬೃಹದಾರಣ್ಯಕ ಉಪನಿಷತ್ತು, ಉಪನಿಷತ್ತುಗಳ ತಾಯಿ ಎನಿಸಿಕೊಂಡು "ಬೃಹತ್" ಎಂಬ ಉಪಮೆಯನ್ನು ಪಡೆದುಕೊಂಡಿಲ್ಲವೇ?

ನಮ್ಮ ಗುರುಗಳು 'ವಿಶ್ವಮಾನ್ಯ' ಗುರುಗಳು, ಅವರ ಶಿಷ್ಯಂದಿರರೆಂದು ಹೆಮ್ಮೆಯಿಂದ ಅಭಿಮಾನದಿಂದ ಹೇಳಿಕೊಂಡು ಮಾನವ ಜನ್ಮದ ಸಾರ್ಥಕ್ಯಪಡಿಸಿಕೊಳ್ಳಿ ಎಂದು ಅತ್ಮಾಭಿಮಾನದ ಜ್ಯೋತಿಯನ್ನು ಬೆಳಗಿದರು. 'ಕಣ್ವಾಭಿಮಾನ'ದ ಬೀಜವನ್ನು ನಮ್ಮೆಲ್ಲರಲ್ಲಿ ಬಿತ್ತಿದರು. ಅಂತೆಯೇ ಯುವಕರಲ್ಲಿ ಉತ್ಸಾಹ, ಧೈರ್ಯಗಳನ್ನು ತುಂಬಲು "ಆತ್ಮ ಗೌರವ ಸಂರಕ್ಷಣ ಕ್ರಾಂತಿದಳ" ವನ್ನು ಸ್ಥಾಪಿಸಿದರು. ಅವರ ಭಗೀರಥ ಪ್ರಯತ್ನ ಜೀವನಪೂರ್ತಿ ಮುಂದುವರೆಯುತ್ತಲೇ ಹೋಯಿತು. ಹೌದು, ತಮ್ಮ ಅನೇಕ ನಿಲುವುಗಳನ್ನು ಸರ್ವಜಿತ್ ಸಂವತ್ಸರದ ಫಾಲ್ಗುಣ॥ ಶುಕ್ಲ ನವಮಿಯಂದು (15.03.2008) ಮೈಸೂರಿನಲ್ಲಿ ಜರುಗಿದ ಅಖಿಲ

ಭಾರತ ಮಾಧ್ವ ಮಂಡಲದ 26ನೇಯ ಮಾಧ್ವ ತತ್ವಜ್ಞಾನ ಸಮ್ಮೇಳನದಲ್ಲಿ ಅರುಹಿದರು. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ (ಪೇಜಾವರಶ್ರೀ) ಶ್ರೀಪಾದರು ವಹಿಸಿದ್ದರು. ಹಾಗೆಯೇ ಈ ಮಹಾ ಅಧಿವೇಶನದಲ್ಲಿ ಮಾಧವ ತೀರ್ಥ ಮಹಾಸಂಸ್ಥಾನದ ಶ್ರೀ 1008 ಶ್ರೀ ಪ್ರಸನ್ನಶೂರ ಮಾಧವತೀರ್ಥ, ಶ್ರೀ ವಿದ್ಯಾಸಾಗರ ಮಾಧವತೀರ್ಥ, ಫಲಿಮಾರು ಮಠಾಧೀಶರು, ಸುಬ್ರಹ್ಮಣ್ಯ ಮಠಾಧೀಶರು ಮತ್ತು ಅಖಿಲ ಭಾರತ ಮಹಾ ಮಂಡಲದ ಅಧ್ಯಕ್ಷರಾದ ಶ್ರೀ ವಿಷ್ಣುಮೂರ್ತಿ ಏರ್ಕಾಡಿತಾಯ, ಶ್ರೀಮದುತ್ತರಾಧಿಮಠದ ವಿದ್ವಾನ್ ಪಂಢರಿನಾಥಾಚಾರ್ಯ ಗಲಗಲಿ, ವ್ಯಾಸರಾಜಮಠದ ಅಂದಿನ ಕುಲಪತಿಗಳಾದ ಡಿ.ಪ್ರಲ್ಹಾದಾಚಾರ್ಯ, ಶ್ರೀ ರಾಯರ ಮಠದ ಹಾಗೂ ಶ್ರೀಪಾದರಾಜರ ಮಠದ ಅನೇಕ ವಿದ್ವಾಂಸರುಗಳು ಹಾಗೂ ಸಾಗರೋಪಮಶ್ರೋತಿಯರ ಉಪಸ್ಥಿತಿಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕಣ್ವ ಶಾಖಿಯರನ್ನು ಸಮಾಜದ ಇತರೆ ಎಲ್ಲ ಮಠದವರೊಂದಿಗೆ ಸಮಾನವಾಗಿ, ಯಾವುದೇ ರೀತಿಯ ಭೇದ ಹಾಗೂ ತಾರತಮ್ಯ ಮಾಡದಂತೆ ನೋಡಿಕೊಳ್ಳುವ ನಿರ್ಣಯವನ್ನು ಅನುಮೋದಿಸಿ, ಈ ಪ್ರಕಾರ ತಮ್ಮ ತಮ್ಮ ಸಮಾಜಕ್ಕೆ ಆದೇಶ ನೀಡುವಂತೆ ಉಪಸ್ಥಿತರಿದ್ದ ಎಲ್ಲಾ ಮಠಾಧಿಪತಿಗಳನ್ನು ಸಮ್ಮೇಳನದ ಮೂಲಕ ಕೋರಲಾಯಿತು.

ಈ ಸಭೆಯಲ್ಲಿ "ಶ್ರೀ ವಿದ್ಯಾಭಾಸ್ಕರತೀರ್ಥ" ಶ್ರೀಪಾದರು ಬ್ರಾಹ್ಮಣ್ಯದ ಗೌರವ ಘನತೆಯನ್ನು ಇಡೀ ಮಾನವ ಕುಲಕ್ಕೆ ಮೇಲ್ಮಟ್ಟದಲ್ಲಿ ಇಟ್ಟುಕೊಳ್ಳಲು ಬ್ರಾಹ್ಮಣ ಸಮಾಜವು ಪರಸ್ಪರರನ್ನು ಯಥಾರ್ಥವಾಗಿ ಅರ್ಥೈಸಿಕೊಂಡು ಅಶಾಸ್ತ್ರೀಯ ರೂಢಿಗಳನ್ನು ದೂರೀಕರಿಸಿ ಈ ಜನ್ಮದಲ್ಲಿ ಪರಸ್ಪರ ಪ್ರೇಮಾದರಗಳನ್ನು ಬೆಳಸಿಕೊಂಡು ಪರತ್ರ ಸಾಧನೆಗೆ ಮಾರ್ಗ ಮಾಡಿಕೊಳ್ಳಬೇಕು ಎಂದು ಆರ್ತಭಾವದಿಂದ, ಕಳಕಳಿಯಿಂದ ಪ್ರಾರ್ಥಿಸಿದರು. ಹೀಗೆ ಶ್ರೀಪಾದರು ಕಣ್ವ ಶಾಖೀಯರ ಗೌರವವನ್ನು ಸಮಾಜದಲ್ಲಿ ಹೆಚ್ಚಿಸಿಕೊಳ್ಳುವುದರೊಂದಿಗೆ ಇತರೆ ಎಲ್ಲ ಮಠದ ಮಠಾಧೀಶರೊಂದಿಗೆ ಸ್ನೇಹ ಸಂಬಂಧವನ್ನು ಕಾಯ್ದುಕೊಂಡಿರುವುದು ಅಮೋಘವಾದುದು ಹಾಗೂ ವರ್ಣಾತೀತ.

ಮೂಲ ಕಣ್ವರು 8 ಲಕ್ಷ ವರ್ಷದ ಆಚೆಯಿಂದ ಬಂದಂತಹ ಪ್ರಾಚೀನರು. ಹೀಗಾಗಿ ಇಡೀ ಭಾರತಾದ್ಯಂಥ ಶುಕ್ಲ ಯಜುರ್ವೇದಿಗಳು ಪಸರಿಸಿದ್ದಾರೆ. ಅದಕ್ಕಾಗಿಯೇ ಶ್ರೀಪಾದರು ಶುಕ್ಲ ಯಜುರ್ವೇದಿಗಳ ಜನಸಂಖ್ಯಾ ಸಮೀಕ್ಷೆಯನ್ನು ನಡೆಸಿದ್ದರು. ಭರತ ವರ್ಷದ ಉತ್ತರ ಪ್ರದೇಶ, ಆಸ್ಸಾಂ, ಬಿಹಾರ, ಓರಿಸ್ಸಾ, ಗುಜರಾತ, ರಾಜಸ್ಥಾನ, ಮಧ್ಯಪ್ರದೇಶ, ಆಂದ್ರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ ಪ್ರಾಂತಗಳಲ್ಲಿ ಸಮೀಕ್ಷೆ ನಡೆಸಿದರು. ಇಡೀ ಬ್ರಾಹ್ಮಣ ಸಮಾಜದಲ್ಲಿ ಮುಕ್ಕಾಲು ಪಾಲು ಅಂದರೆ 2 ಕೋಟಿ ಜನರು ಶುಕ್ಲ ಯಜುರ್ವೇದಿಗಳಾಗಿದ್ದಾರೆ ಎಂಬ ಅಂಕಿ ಅಂಶಗಳನ್ನು ತಿಳಿಸಿದರು. ಈ ಎಲ್ಲ ಪ್ರಾಂತಗಳ ಜನರೊಡನೆ ಸಂಪರ್ಕವನ್ನಿಟ್ಟಿಕೊಂಡಿದ್ದರು. ಆ ಪ್ರಾಂತಗಳ ಪಂಡಿತರುಗಳ ಹಾಗೂ ವಿದ್ವಾಂಸರುಗಳ ಪರಿಚಯ ಮಾಡಿಕೊಂಡು, ಅವರೊಡನೆ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದರು. ಹಾಗೆಯೇ ಅವರೆಲ್ಲರಿಗೂ "ಕಣ್ವಮಠ"ದ ಬಗ್ಗೆ ಪರಿಚಯ

ಮಾಡಿಕೊಡುತ್ತಿದ್ದರಲ್ಲದೆ, ಇವರೆಲ್ಲರನ್ನು ಒಂದೇ ವೇದಿಕೆ ಅಡಿಯಲ್ಲಿ ಒಗ್ಗೂಡಿಸಬೇಕೆಂದು ಕ್ರಿ.ಶ.1994 ರಲ್ಲಿ ಅಖಿಲ ಭಾರತ ಯೋಗೀಶ್ವರ ಯಾಜ್ಞವಲ್ಕ್ಯ ಮಹಾಮಂಡಲ (ನೋಂದಣಿ) ವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು.

ಎಲ್ಲ ಪ್ರಾಂತಗಳಲ್ಲಿ ನಮ್ಮ ಸಮಾಜದ ಸಂಘ–ಸಂಸ್ಥೆಗಳನ್ನು ಕಟ್ಟುವುದು, ಶಿಕ್ಷಣ ಕ್ರಾಂತಿ ಮಾಡುವುದು, ಜನರಲ್ಲಿ ಧರ್ಮ ಜಾಗೃತಿಯನ್ನು ಮೂಡಿಸುವುದು, ಧಾರ್ಮಿಕ ಕಿರು ಹೊತ್ತಿಗೆಗಳನ್ನು ಪ್ರಕಟಿಸುವುದು, ಪಾರಾಯಣಕ್ಕಾಗಿ ಸ್ತೋತ್ರಗಳನ್ನು ಪ್ರಕಟಿಸುವುದು ಮುಂತಾದ ಯೋಜನೆಗಳನ್ನು ಅಖಿಲ ಭಾರತ ಮಟ್ಟದಲ್ಲಿ ಚರ್ಚಿಸಿ ಮುಂದುವರೆಸುವುದು ಈ ಸಂಘದ ಮುಖ್ಯ ಉದ್ದೇಶವಾಗಿತ್ತು.

ಕ್ರಿ.ಶ.1993 ರಲ್ಲಿ ತಮ್ಮ ಪ್ರಥಮ ಚಾತುರ್ಮಾಸ ಸಂಕಲ್ಪ ವ್ರತವನ್ನು ಬೆಂಗಳೂರಿನಿಂದ ಪ್ರಾರಂಭಿಸಿದರು. ಮುಂದೆ 1994, 1995 ಎರಡು ಸಂವತ್ಸರದ ವ್ರತಗಳನ್ನು ಹುಣಸಿಹೊಳೆಯಲ್ಲಿಯೇ ನಡೆಸಿದರು.

ಮುಂದೆ ಕ್ರಿ.ಶ.1996 ರಲ್ಲಿ ದೆಹಲಿಯಲ್ಲಿ ತಮ್ಮ ಚಾತುರ್ಮಾಸ ವ್ರತವನ್ನು ಕೈಗೊಂಡರು. ಆಗ ಅಲ್ಲಿಯ ವಿದ್ಯಾಭವನಕ್ಕೆ ವಸಂತ ಸಾಠೆಯವರು ಕಾರ್ಯದರ್ಶಿಗಳಾಗಿದ್ದರು. ಅಲ್ಲಿ ಶ್ರೀಪಾದರು "ಇಂದು ಮುಂದು ಇಹಪರಗಳ ಸಾಧನೆಗೆ ವೇದಗಳ ಪ್ರಸ್ತುತತೆ" ಕುರಿತು ಪ್ರೌಢವಾಗಿ, ನಿರ್ಗಳವಾಗಿ, ಉಪನ್ಯಾಸವನ್ನು ಹಿಂದಿ ಮತ್ತು ಇಂಗ್ಲೀಷನಲ್ಲಿ ನೀಡಿದರು. ಈ ಉಪನ್ಯಾಸ ಕಾರ್ಯಕ್ರಮ ಕೇವಲ ಐ.ಎ.ಎಸ್. ಅಧಿಕಾರಿಗಳಿಗಾಗಿ ಆಯೋಜಿಸಲಾಗಿತ್ತು. ಈ ವಿಷಯವನ್ನು ಅರಿತು ಮಾಜಿ ಪ್ರಧಾನ ಮಂತ್ರಿಗಳಾದ ಅಟಲ ಬಿಹಾರಿ ವಾಜಪೇಯಿ ಅವರು ಶ್ರೀಪಾದರನ್ನು ಭೇಟಿಯಾಗಿ ಅಭಿನಂದಿಸಿ ಚಾತುರ್ಮಾಸ ಕಾರ್ಯಕ್ರಮ ಸಮೀತಿಯ ಅಧ್ಯಕ್ಷರಾದರು. ಅಲ್ಲದೆ "ಅಖಿಲ ಭಾರತ ಶುಕ್ಲ ಯಜುರ್ವೇದ ವಿಜ್ಞಾನ ಪರಿಷತ್‌ನ್ನು ಸ್ಥಾಪಿಸಿ ಅದರ ಅಧ್ಯಕ್ಷತೆಯನ್ನು ಸ್ವತಃ ತಾವೇ ವಹಿಸಿಕೊಂಡರು. ಈ ಪರಿಷತ್ತಿನಿಂದ ನಡೆದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಅಂದಿನ ಘನವೆತ್ತ ರಾಷ್ಟ್ರಪತಿಗಳಾದ "ಶ್ರೀ ಶಂಕರದಯಾಳ ಶರ್ಮಾ" ಹಾಗೂ ಅತಿಥಿಗಳಾಗಿ ಪುರಿ ಶಂಕರಾಚಾರ್ಯರು ಪಾಲ್ಗೊಂಡಿದ್ದರು. ತಾವು ದೆಹಲಿಯಲ್ಲಿ ಚಾತುರ್ಮಾಸ್ಯದ ವ್ರತಾನುಷ್ಠಾನ ದಲ್ಲಿರುವಾಗಲೇ ಅಂದಿನ ಪ್ರಧಾನ ಮಂತ್ರಿಗಳಾದ ಶ್ರೀಯುತ ದೇವೇಗೌಡರ (ಕರ್ನಾಟಕ) ಧಾರ್ಮಿಕ ಆಪ್ತ ಕಾರ್ಯದರ್ಶಿಗಳಾಗಿದ್ದ ಶ್ರೀಯುತ ಶಿವಕುಮಾರ ಅವರ ಮನೆಯ ಆದರಾತಿಥ್ಯ ಸ್ವೀಕರಿಸಿ ತಮ್ಮ ಸಾನಿಧ್ಯದಲ್ಲಿಯೇ ಮಠದ ಆಚಾರ್ಯರುಗಳಿಂದ ಶ್ರೀ ಸತ್ಯನಾರಾಯಣ ಪೂಜೆಯನ್ನು ವೈಭವದಿಂದ ನಡೆಸಿಕೊಟ್ಟಿದ್ದರು.

ನಾಸಿಕ (ವರ್ಷ ತಿಳಿದಿಲ್ಲ) ದಲ್ಲಿ ಚಾತುರ್ಮಾಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಆ ಸಂದರ್ಭದಲ್ಲಿ ತ್ರಯಂಬಕೇಶ್ವರದಲ್ಲಿ ಅಖಿಲ ಭಾರತ ಚತುರ್ವೇದ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದರು.

1997 (ಹುಣಸಿಹೊಳೆ), 1998 (ಹುಣಸಿಹೊಳೆ), 1999 (ಹುಣಸಿಹೊಳೆ), 2000 (ಬಾಗಲಕೋಟ), 2001 (ಹುಣಸಿಹೊಳೆ), 2002 (ರಾಯಚೂರು), 2003 (ಬಿದರಹಳ್ಳಿ–ಬೆಂಗಳೂರು)ನಲ್ಲಿ ನಡೆಯಿತು. ಇನ್ನು 2004 ರಲ್ಲಿ ಚಾತುರ್ಮಾಸ ವ್ರತವನ್ನು ಹುಣಸಿಹೊಳೆಯಲ್ಲಿ ಕೈಗೊಂಡಾಗ ಚತುರ್ವೇದ ಪರಿಷತ್ತಿನ 3ನೇಯ ಅಧಿವೇಶನವನ್ನು ಹಾಗೂ ಅಣು ವಿಷ್ಣುಯಾಗವನ್ನು ಬಹು ವಿಜೃಂಭಣೆಯಿಂದ ಮಾಡಿದರು. ಈ ಅಧಿವೇಶನದ ಉದ್ಘಾಟಕರಾಗಿ ವೇ॥ ಬ್ರ॥ ಶ್ರೀ ಶಂಕರ ದೀಕ್ಷಿತರು (ಪೀಠಾಧಿಕಾರಿಗಳು, ಚಿದಂಬರ ಸಂಸ್ಥಾನ ಮುರಗೋಡ) ಅಧ್ಯಕ್ಷ ಸ್ಥಾನವನ್ನು ವೇ॥ ಬ್ರ॥ ಶ್ರೀ ಚಿದಂಬರ ಮೂರ್ತಿ ಚಕ್ರವರ್ತಿಗಳು (ಪೀಠಾಧಿಪತಿಗಳು, ಶ್ರೀ ಶೇಷಾಚಲ ಮಹಾಸಂಸ್ಥಾನ, ಅಗಡಿ) ಅಲಂಕರಿಸಿದ್ದರು. ಮುಖ್ಯ ಅತಿಥಿಗಳಾಗಿ ವೇ॥ ಬ್ರ॥ ಪೂ॥ ಶ್ರೀ ಸುಂದರೇಶ ಬಾಪು ದೀಕ್ಷಿತರು (ಶ್ರೀಕ್ಷೇತ್ರ ಗುರ್ಲಹೊಸೂರು) ಭಾಗವಹಿಸಿದ್ದರು. ಹೀಗೆ ಚಿದಂಬರೇಶ್ವರ ಸಂಸ್ಥಾನದ ಪೀಠಾಧಿಪತಿಗಳನ್ನು ಆಹ್ವಾನಿಸಿ ಗೌರವಿಸಿದ್ದುದರ ಸಂಕೇತವೆಂದರೆ ಶುಕ್ಲಯಜುರ್ವೇದಗಳಲ್ಲಿ ಬರುವ ಎಲ್ಲ ಸಂಪ್ರದಾಯ ದವರಿಗೂ (ಸ್ಮಾರ್ತ, ವೈಷ್ಣವ, ನಾಥ) ಹುಣಸಿಹೊಳೆಯ 'ಕಣ್ವ ಮಠವೇ' ಎಲ್ಲರಿಗೂ ಸಾಧನೆಯ ಕ್ಷೇತ್ರವೆಂದು ಸಾಬೀತುಪಡಿಸಿದರು. ತಮ್ಮ ಸಂಕಲ್ಪೋತ್ಥಾನದ ದಿನ ಅಣು ವಿಷ್ಣುಯಾಗವನ್ನು ತಮ್ಮ ಪೂರ್ವಾಶ್ರಮದ ಅಗ್ರಜರಾದ ವೇ॥ ಮೂ॥ ಶ್ರೀ ವೆಂಕಟವರಹಪ್ಪಯ್ಯ ದೇವರು ನೇತೃತ್ವದಲ್ಲಿ ಹವಿರ್ಯಜ್ಞಗಳನ್ನು ಪೂರೈಸಿದರು. ಈ ಮಹಾತ್ಮರು ಶ್ರೀ ಶ್ರೀಪಾದರ ಬೆನ್ನೆಲುಬಾಗಿ ನಿಂತು ಶ್ರೀ ಮಠದ ಸೇವೆಯನ್ನು ಸಲ್ಲಿಸಿದ್ದು ಶ್ಲಾಘನೀಯ. ಕ್ರಿ.ಶ.2005 (ಮುಳಬಾಗಿಲು), 2006 (ಹುಣಸಿಹೊಳೆ), 2007 (ಹುಣಸಿಹೊಳೆ), 2008 (ಬೆಂಗಳೂರು), 2009, 2010, 2011, 2012 ರ ಎಲ್ಲಾ ಚಾತುರ್ಮಾಸ ವ್ರತಗಳನ್ನು ಹುಣಸಿಹೊಳೆಯಲ್ಲಿಯೇ ಕೈಗೊಂಡರು.

ಕ್ರಿ.ಶ.1997 ರಲ್ಲಿ ನಡೆದ ವಿಶ್ವಹಿಂದು ಪರಿಷತ್ ಸಭೆಗೆ ಭಾರತದ ಬೇರೆ ಬೇರೆ ರಾಜ್ಯಗಳಿಂದ ಧರ್ಮ ಗುರುಗಳನ್ನು ಆಹ್ವಾನಿಸಿ ಮಾರ್ಗದರ್ಶನ ಸಭೆ ನಡೆಸಿದರು. ಹಾಗೂ ಕ್ರಿ.ಶ.1998 ರಲ್ಲಿ ಉತ್ತರ ಭಾರತದ ರಾಜ್ಯಗಳಿಗೆ ದಿಗ್ವಿಜಯಕ್ಕೆ ಹೋದ ಸಂದರ್ಭದಲ್ಲಿ ದೆಹಲಿಗೆ ಭೇಟಿ ಕೊಟ್ಟಾಗ ಆಗಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಯುತ ಅಟಲ ಬಿಹಾರಿ ವಾಜಪೇಯಿ ಯವರು ಶ್ರೀಪಾದರನ್ನು ಭೇಟಿಯಾಗಿ ಅವರ ಆಶೀರ್ವಾದ ಪಡೆದಿದ್ದರು.

ನೇಪಾಳದಲ್ಲಿನ ಸಿದ್ಧಾರ್ಥಪುರದಲ್ಲಿ ನಡೆದ ಅಂತರರಾಷ್ಟ್ರೀಯ ಧಾರ್ಮಿಕ ಸಮ್ಮೇಳನಕ್ಕೆ ಭಾರತದ ಧರ್ಮಗುರುಗಳ ಪ್ರತಿನಿಧಿಯಾಗಿ ಪಾಲ್ಗೊಂಡಿದ್ದರು. ಅಲ್ಲಿಯೂ ಸಹ ಎಲ್ಲರನ್ನು ತಮ್ಮ ಆಳವಾದ ಜ್ಞಾನ, ಅಪರಿಮಿತ ಪಾಂಡಿತ್ಯ ಹಾಗೂ ವಾಕಚತುರತೆಗೆ ನಿಬ್ಬೆರಗಾಗುವಂತೆ ಮಾಡಿ, ಶುಕ್ಲ ಯಜುರ್ವೇದದ ಪತಾಕೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾರಿಸಿದರು. ಅವರು ಪುರಾಣಗಳ ಅಧ್ಯಯನ ಮಾಡುತ್ತಲೇ, ಬರೆಯುವ ಕಲೆಯು ಅವರಿಗೆ ಕರಗತವಾಗಿತ್ತು. ಅಂತೆಯೇ ದಿನಾಂಕ: 03.11.2000 ರಂದು "ಸಾಧಕರೊಂದಿಗೆ ಸಮಾಲೋಚನೆ" ಹಾಗೂ 16.04.2002 ರಲ್ಲಿ "ಶ್ರೀಪಾದರ ಸಂದೇಶ" ಎಂಬ ಸ್ವರಚಿತ ಕಿರುಹೊತ್ತಿಗೆಗಳನ್ನು ಅಖಿಲ ಭಾರತ ಯಾಜ್ಞವಲ್ಕ್ಯ ಮಹಾಮಂಡಳಿಯಿಂದ ಬಿಡುಗಡೆಗೊಳಿಸಿದರು. ದಿನಾಂಕ:

31.12.2004 ರಲ್ಲಿ ಕಲ್ಬುರ್ಗಿ ಜಿಲ್ಲೆಯ ಮರತೂರ ಗ್ರಾಮದಲ್ಲಿ ಸ್ಥಾಪಿಸಲಾದ "ವಿಜ್ಞಾನೇಶ್ವರ ಭವನ ಹಾಗೂ ಸಂಶೋಧನಾ ಕೇಂದ್ರ"ದ ಕಟ್ಟಡದ ಉದ್ಘಾಟನೆಯು ಶ್ರೀಪಾದರ ಅಮೃತ ಹಸ್ತದಿಂದ ನೆರವೇರಿತು. ಈ ಕಾರ್ಯಕ್ರಮಕ್ಕೆ ಆಗಮಿಸಿದಂತಹ ಶ್ರೀಪಾದರನ್ನು ಕಲ್ಬುರ್ಗಿ, ಶಹಾಬಾದ, ಚಿತಾಪುರಗಳ ಭಜನಾ ಮಂಡಳಿಯ ಸದಸ್ಯೆಯರುಗಳು ಪೂರ್ಣ ಕುಂಭದೊಂದಿಗೆ ಸ್ವಾಗತ ಕೋರಿ ಬಹು ಸಂಭ್ರಮದಿಂದ ಬರಮಾಡಿಕೊಂಡಿದ್ದರು. ಆಗ ಶ್ರೀಪಾದರು "ಶ್ರೀ ವಿಜ್ಞಾನೇಶ್ವರನ ಮಿತಾಕ್ಷರವು, ಜೀಮೂತ ವಾಹನನ ದಯಾಭಾಗಕ್ಕಿಂತ ಹೇಗೆ ಶ್ರೇಷ್ಠವಾಗಿದೆ" ಎಂಬ ವಿಷಯದ ಮೇಲೆ ಸಭಿಕರನ್ನುದ್ದೇಶಿಸಿ ನಿರ್ಗಳವಾಗಿ ಇಂಗ್ಲೀಷಿನಲ್ಲಿ ಮಾತನಾಡಿ "ಮಿತಾಕ್ಷರದ ಘನತೆ ಮತ್ತು ಯಾಜ್ಞವಲ್ಕ್ಯರ ಶ್ರೇಷ್ಠತೆಯನ್ನು ಎತ್ತಿ ಹಿಡಿದರು. ಇವರು ಮಾತೃ ಹೃದಯದ ವಾತ್ಸಲ್ಯಮಯಿಗಳು, ಶ್ರೀಮಠಕ್ಕೆ ಆಗಮಿಸಿದಂತಹ ಭಕ್ತರಿಗೆ ಮೃಷ್ಟಾನ್ನ ಭೋಜನ ಮಾಡಿಸುವುದೆಂದರೆ ಶ್ರೀಗಳಿಗೆ ಅತ್ಯಂತ ಪ್ರೀಯವಾದ ಕೆಲಸ. ಅಂತೆಯೇ ಹರಿದ್ವಾರದಲ್ಲಿ ನಡೆದ ಕುಂಭಮೇಳ ದಲ್ಲಿ ಭಾಗವಹಿಸಿ ಅಲ್ಲಿಯ ಒಂದು ಮಾಸ ಪರ್ಯಂತ ನೆಲೆಸಿ ಸಾಧುಸಂತರಿಗೆ ಅನ್ನಸಂತರ್ಪಣೆ ಮಾಡಿ ಅನ್ನದಾನದ ಮಹಿಮೆಯನ್ನು ಅರುಹಿದ್ದರು. ದಿನಾಂಕ: 20.06.2008 ರಲ್ಲಿ ಮತ್ತೆ ತಮ್ಮ ಸ್ವಂತ ಲೇಖನಿಯಲ್ಲಿ "ವೇದಶಾಖಿಯರಲ್ಲಿ ತಾರತಮ್ಯ ಮಾಡುವ ಕುಜನರ ಮೋಕ್ಷ ಸಾಧನೆಗಾಗಿ ಶಾಸ್ತ್ರೀಯ ಸಮೀಕ್ಷೆ" ಎಂಬ ಕಿರುಹೊತ್ತಿಗೆಯನ್ನು ಅಖಿಲ ಭಾರತ ಯಾಜ್ಞವಲ್ಕ್ಯ ಸಂಘದಿಂದ ಬಿಡುಗಡೆಗೊಳಿಸಿದರು. ಈ ಪುಸ್ತಕವನ್ನು ಅವಲೋಕಿಸಿದರೆ, ಅವರಿಗೆ ಶಾಖಾ ಭೇದದ ನೋವು ಕೊನೆಯತನಕವೂ ಕಾಡಿತ್ತು ಎಂದು ತಿಳಿದುಬರುತ್ತದೆ.

ಶ್ರೀಪಾದರಿಗೆ ಮಹಿಳೆಯ ಬಗೆಗೆ ಅಪಾರವಾದ ಕಾಳಜಿ. ಪ್ರತಿ ಸ್ತ್ರೀಯಳ ಬದುಕು ಕಾತ್ಯಾಯನಿ (ಗೃಹ ನಿರ್ವಹಣೆಗೆ ಹೆಸರಾದರೆ) ಮತ್ತು ಮೈತ್ರೇಯಿ (ಜ್ಞಾನಕ್ಕೆ ಹೆಸರಾದವರು) ಯಂತೆ ರೂಪುಗೊಳ್ಳಲಿ ಎಂದು ಅಪೇಕ್ಷಿಸುತ್ತಿದ್ದರು. ಅಂತೆಯೇ ಮಹಿಳೆಯರಲ್ಲಿ ಧಾರ್ಮಿಕ ಜಾಗೃತಿ ಹೆಚ್ಚಿನ ಮಟ್ಟದಲ್ಲಿ ಮುಂದುವರೆಯಲಿ ಎಂದು "ಮೈತ್ರೇಯಿ" ಭಜನಾ ಮಂಡಳಿಗಳನ್ನು ಸ್ಥಾಪನೆ ಮಾಡಿದರು. ಹರಿದಾಸ ಸಾಹಿತ್ಯದೊಂದಿಗೆ, ವ್ಯಾಸ ಸಾಹಿತ್ಯವನ್ನು ಅಭ್ಯಸಿಸಿ, ಹಾಡುಗಳ ಹಿನ್ನೆಲೆ, ಅವುಗಳಲ್ಲಿ ಅಡಗಿರುವ ಸೂಕ್ಷ್ಮತೆಗಳನ್ನು ತಿಳಿದುಕೊಳ್ಳಿ ಎಂದು ಬೋಧಿಸಿದ್ದರು.

ಕಣ್ವ ಮಠದ ಪ್ರಚಾರಕ್ಕಾಗಿ ಭಾರತಾದ್ಯಂತೆ ಸುತ್ತಾಡಿದರು. 2 ಸಲ ಭಕ್ತರೊಡನೆ "ಬದರಿ ಯಾತ್ರೆ"ಯನ್ನು ಕೈಗೊಂಡರು. ಚಿತ್ತಾಪೂರ, ಶಹಾಬಾದ, ಸೇಡಂ, ಜೇವರ್ಗಿ ಹೀಗೆ ಚಿಕ್ಕ ಚಿಕ್ಕ ಗ್ರಾಮದ ಜನರು ಶ್ರೀಪಾದರಿಗೆ ಆಹ್ವಾನ ಕೊಟ್ಟರೂ ಸಹ ಸಂತೋಷದಿಂದ ಭೇಟಿಕೊಟ್ಟಿದ್ದರು. 'ಹನಿ ಹನಿಗೂಡಿದರೆ ಹಳ್ಳ" ಎಂಬಂತೆ ಸತತ ಪ್ರಯತ್ನಕ್ಕೆ ಫಲವಿದೆ ಎಂದು ಹೇಳುತ್ತ ಜೀವನಪೂರ್ತಿ ಪ್ರಯತ್ನಿಸೋಣ ಎಂದು ಆಗಾಗ ಹೇಳುತ್ತಿದ್ದರು. "ಸಂತಂತಂ ಚಿಂತಯೇನಂತಮಂತಕಾಲೇ ವಿಶೇಷತಃ" ಎಂಬಂತೆ ಶ್ರೀಪಾದರಿಗೆ ಸದಾಕಾಲ ಕಣ್ವಶಾಖಿಯರ ಬಗೆಗೆ ನಿರಂತರ ಆಲೋಚನೆ, ಅರಘಳಿಗೆಯೂ ಬೇರೆ ವಿಷಯದ ಕಡೆಗೆ ಗಮನವಿರುತ್ತಿರಲಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ಒಂದೊಂದು ಸಲ ಅಡಿಗೆಯವರು ಬರದೇ ಇದ್ದುದು ಗಮನಕ್ಕೆ ಬರುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಕೇವಲ ಬಾಳೆಹಣ್ಣಿನ ರಸವನ್ನೇ ಪ್ರಸಾದವಾಗಿ ಸ್ವೀಕರಿಸುತ್ತಿದ್ದರು. ನಮ್ಮ ಸಮಾಜದ ಜನರಿಗೆ ತಿಳುವಳಿಕೆ

ಮೂಡಿಸುವುದೇ ದೊಡ್ಡ ಪ್ರಶ್ನೆಯಾಗಿ ಕಾಡಿತ್ತು. ಅಂತೆಯೇ ಸಿಕ್ಕಂತಹ ಸುವರ್ಣ ಅವಕಾಶವನ್ನು ಚೆನ್ನಾಗಿ ಸದ್ಬಳಕೆ ಮಾಡಿಕೊಳ್ಳುತ್ತಿದ್ದರು. ಹೌದು, ಗುರುಗಳ ಆರಾಧನಾ ಹಾಗೂ ವಿಶೇಷ ಸಂದರ್ಭಗಳಲ್ಲಿ ಜನರು ಒಗ್ಗೂಡಿದಾಗ ಪಂಡಿತರುಗಳಿಂದ ಶ್ರೀ ಯಾಜ್ಞವಲ್ಕ್ಯರ ಬಗೆಗೆ ಪ್ರವಚನ ಮಾಡಿಸುತ್ತಿದ್ದರು. ಅಂತೆಯೇ 2011 ರಲ್ಲಿ ಶ್ರೀಮನ್ ಮಾಧವತೀರ್ಥರ ಆರಾಧನಾ ಮಹೋತ್ಸವಕ್ಕೆ ಬಹುಶ್ರುತ ವಿದ್ಯುನ್ಮಣಿ, ತರ್ಕಶಾಸ್ತ್ರ ಪ್ರವೀಣ ಹಾಗೂ ಪ್ರಭಾವಿ ವಾಙ್ಮಯಿಗಳಾಗಿದ್ದ ಶ್ರೀಯುತ ಬನ್ನಂಜೆ ಗೋವಿಂದಾಚಾರ್ಯರನ್ನು ಆಹ್ವಾನಿಸಿ ಪ್ರವಚನ ಮಾಡಿಸಿದ್ದರು. ಅಂದು ಆ ಸಭೆಯಲ್ಲಿ ಈ ಮಹಾತ್ಮರು ಶ್ರೀ ಯಾಜ್ಞವಲ್ಕ್ಯರು ಜನಕರಾಜನ ಬಹುದಕ್ಷಿಣಾಯಾಗದಲ್ಲಿ ಇತರೆ ಬ್ರಹ್ಮಜ್ಞಾನಿಗಳೊಂದಿಗೆ ನಡೆದ ಪ್ರಶ್ನೋತ್ತರ ಚರ್ಚೆಗಳನ್ನು ಮಾರ್ಮಿಕವಾಗಿ ತಿಳಿಸಿ, ಶ್ರೀ ಯಾಜ್ಞವಲ್ಕ್ಯರನ್ನು ಶ್ರೇಷ್ಠ ಬ್ರಹ್ಮಜ್ಞಾನಿಗಳೆಂದು ಕೊಂಡಾಡಿದ್ದರು. ಹಾಗೆಯೇ ಸಕಲ ಸಂಕಷ್ಟಗಳ ಪರಿಹಾರಕ ಸ್ತೋತ್ರ ವಿಷ್ಣುಸಹಸ್ರನಾಮದ ಪಾರಾಯಣದ ಬಗೆಗೆ ಶ್ರೋತ್ರಗಳೊಂದಿಗೆ ಸಂವಾದ ನಡೆಸಿದ್ದರು.

ದಿನಾಂಕ: 1.11.2011 ರಲ್ಲಿ 'ಅಖಿಲ ಭಾರತ ಯಾಜ್ಞವಲ್ಕ್ಯ ಮಹಾಮಂಡಳಿ'ಯಿಂದ "ಕಣ್ವ ವೈಭವ" ಎಂಬ ಮಾಸಪತ್ರಿಕೆಯನ್ನು ಆರಂಭ ಮಾಡಿದರು. ನಮ್ಮ ಸಮಾಜದ ಜನರಲ್ಲಿ ಗುರು ಪರಂಪರಾ ವಿಷಯಗಳ ಬಗೆಗಿನ ಜ್ಞಾನ ದೊರೆಯಲಿ ಎಂಬ ಉದ್ದೇಶದೊಂದಿಗೆ ಶ್ರೀಯುತ ಜಿ.ಆರ್. ನಾಗಭೂಷಣರಾವ (ವ್ಯವಸ್ಥಾಪಕ ಸಂಪಾದಕರು) ಹಾಗೂ ಶ್ರೀಯುತ ಎಂ.ಜಗನ್ನಾಥಾಚಾರ್ಯ ಅನವಟ್ಟಿ (ಪ್ರಧಾನ ಸಂಪಾದಕರ) ನೇತೃತ್ವದಲ್ಲಿ ಪ್ರಬುದ್ಧ ಲೇಖಕ ಹಾಗೂ ಲೇಖಕಿಯರ ಮಾರ್ಗದರ್ಶನದಲ್ಲಿ ಹೊಸ ಪ್ರತಿಭೆಗಳಿಗೆ ಲೇಖನಕ್ಕೆ ಅವಕಾಶ ಕಲ್ಪಿಸಿ ಪ್ರೋತ್ಸಾಹಿಸಿದರು. ಈ ಮಾಸ ಪತ್ರಿಕೆಯಲ್ಲಿ "ಭಾಸ್ಕರ ಸಂದೇಶ" ಎನ್ನುವ ಅಂಕಣದಲ್ಲಿ ಅನೇಕ ಉಪಯುಕ್ತ ಮಾಹಿತಿಗಳನ್ನೊಳಗೊಂಡ ಜ್ಞಾನಪೂರ್ಣ ಲೇಖನಗಳನ್ನು ಬರೆಯತೊಡಗಿದರು. ಈ ಮಾಸ ಪತ್ರಿಕೆಯ ದ್ವಿತೀಯ ಸಂಚಿಕೆಯ ಬಿಡುಗಡೆ ಕಾರ್ಯಕ್ರಮವು ಬೆಂಗಳೂರಿನ ಚಾಮರಾಜಪೇಟೆಯ ಶ್ರೀ ಯಾಜ್ಞವಲ್ಕ್ಯ ಆಶ್ರಮದಲ್ಲಿ ದಿನಾಂಕ: 01.01.2012 ರಂದು ಬಹು ವಿಜೃಂಭಣೆಯಿಂದ ಜರುಗಿದವು. ಅಂದಿನ ಶುಭದಿನದಂದು, ಅದೇ ವೇದಿಕೆಯಲ್ಲಿ ಮತ್ತೊಂದು ಮಹತ್ವದ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಅವರ ಯೋಜನೆಯು ಮುಂದಾಲೋಚನೆಯ ಕಲ್ಪನಾಶಕ್ತಿಗೆ ನಾವೆಲ್ಲರೂ ತಲೆಬಾಗಲೇಬೇಕು. ಹೌದು, 2020 ರ ಹೊತ್ತಿಗೆ ಈ ಜಗತ್ತೇ ಆಧುನಿಕ ತಂತ್ರಜ್ಞಾನಮಯವಾಗುತ್ತದೆ ಎಂದು ಮನಗಂಡು 2012 ರಲ್ಲೇ ಕಣ್ವ ಮಠಕ್ಕೆ ಸಂಬಂಧಿಸಿದಂತೆ 'ವೆಬ್‌ಸೈಟ'ನ್ನು ಬಿಡುಗಡೆ ಮಾಡಿ ಹಿಂದೂ ಸಂಸ್ಕೃತಿಯ ಪರಂಪರೆಗಳನ್ನು ಉಳಿಸಿಕೊಳ್ಳುವುದು, ಲೋಕಕಲ್ಯಾಣಕ್ಕಾಗಿ ಬಹಳ ಅಗತ್ಯವಾಗಿದೆ ಎಂದು ತಮ್ಮ ಆಶೀರ್ವಚನದಲ್ಲಿ ತಿಳಿಸಿದರು. ಮುಂದೆ 12.03.2012 ರಲ್ಲಿ ಕಲಬುರಗಿಯ ಯಾಜ್ಞವಲ್ಕ್ಯ ಭವನದಲ್ಲಿ ಶ್ರೀ ಸೂರ್ಯನಾರಾಯಣ ದೇವರು ಹಾಗೂ ಶ್ರೀ ಯಾಜ್ಞವಲ್ಕ್ಯ ಗುರುಗಳ ಮೂರ್ತಿ ಪ್ರತಿಷ್ಠಾಪನೆಯ ಕಾರ್ಯಕ್ರಮಗಳೆಲ್ಲವೂ ಶ್ರೀಪಾದರ ಸಾನಿಧ್ಯದಲ್ಲಿ ಶ್ರೀ ಪೇಜಾವರ ಶ್ರೀಗಳೊಂದಿಗೆ, ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಹಾಗೂ ಗಂವಾರದ ತ್ರಿವಿಕ್ರಮಾನಂದ ಮಠದ ಶ್ರೀ ಸೋಪಾನನಾಥ ಸ್ವಾಮೀಜಿ ಹಾಗೂ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಜರುಗಿದವು. ದಿನಾಂಕ : 25, 26, 27

ರಿಂದ ನಂದನನಾಮ ಸಂವತ್ಸರದಲ್ಲಿ ಶ್ರೀಮನ್ ಮಾಧವ ತೀರ್ಥರ 202ನೇಯ ಆರಾಧನಾ ಮಹೋತ್ಸವವು ಶ್ರೀಪಾದರ ಅಧ್ಯಕ್ಷತೆಯಲ್ಲಿ, ಬುದ್ದಿನ್ನಿಯ ಮಾಧವತೀರ್ಥ ವಿಶ್ವಸ್ಥ ಮಂಡಳಿಯವರೊಂದಿಗೆ ಜೊತೆಗೂಡಿ 3 ದಿನಗಳ ಕಾಲ ಬಹು ವಿಜೃಂಭಣೆಯಿಂದ ಆಚರಿಸಿದರು. 3 ದಿನಗಳಲ್ಲಿಯೂ ವಿಶೇಷ ಬಗೆಯ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಮಕ್ಕಳೊಂದಿಗೆ, ಸ್ತ್ರೀ ಪುರುಷರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿದರೆ ಮತ್ತೊಂದು ದಿನ ನಮ್ಮ ಸಮಾಜದ ಲೇಖಕಿಯ ವೃಂದದವರಿಗೂ ಹಾಗೂ ಪಂಡಿತರುಗಳಿಗೆ ಗೌರವ ಸನ್ಮಾನವನ್ನಿಟ್ಟುಕೊಂಡಿದ್ದರು. ಆ ಆರಾಧನೆಯ ಕೇಂದ್ರಬಿಂದುವಾಗಿದ್ದ ಆಧ್ಯಾತ್ಮಿಕ ಚಿಂತಕರಾದ ಡಾ॥ ಪಾವಗಡ ಪ್ರಕಾಶರಾವ ಮಹನೀಯರು. ಇವರು ನಮ್ಮ ಗುರುಗಳಾದ ಶ್ರೀ ಯಾಜ್ಞವಲ್ಕ್ಯರ ಬಗೆಗೆ ಎಷ್ಟು ಅಧ್ಯಯನ ಮಾಡಿದ್ದಾರೆ ಎಂದು ತಿಳಿದುಕೊಂಡು ಅಚ್ಚರಿಯಾಗಿತ್ತು. ಏಕೆಂದರೆ ಅವರು ತಿಳಿಸಿಕೊಟ್ಟ ಮಾಹಿತಿಗಳೆಲ್ಲವೂ ನಮಗೆ ಹೊಸ ವಿಷಯಗಳಾಗಿದ್ದವು. ಹಾಗೂ ಅಂದಿನ ಮಧ್ಯಾರಾಧನೆಯ ದಿವಸ ಈ ಆಧ್ಯಾತ್ಮಿಕ ಚಿಂತಕರು "ಯಾಜ್ಞವಲ್ಕ್ಯ ದರ್ಶನ" ಎಂಬ ವಿಷಯದ ಮೇಲೆ ಪ್ರೌಢವಾದ ಉಪನ್ಯಾಸ ನೀಡಿದರು. ಆಗ ಅವರು ತಮ್ಮ ಉಪನ್ಯಾಸದಲ್ಲಿ "ಮೊದಲು" ಎನ್ನುವ ವಿಶೇಷಣವನ್ನಿಟ್ಟುಕೊಂಡು ಶ್ರೀ ಯಾಜ್ಞವಲ್ಕ್ಯ ಗುರುಗಳು ಆಧ್ಯಾತ್ಮಿಕ ಪ್ರಪಂಚದಲ್ಲಿ ಯಾವ ಬಗೆಯಲ್ಲಿ ಮೊದಲನೆಯ ವ್ಯಕ್ತಿಯಾಗುತ್ತಾರೆ ಎಂಬುದರ ಬಗ್ಗೆ ಎಳೆಎಳೆಯಾಗಿ ಬಿಡಿಸಿ ಹೇಳಿದ್ದರು. ಉದಾ: ಶ್ರೀ ಯಾಜ್ಞವಲ್ಕ್ಯರ ಕೃತಿಯಾದ "ಯೋಗ ಯಾಜ್ಞವಲ್ಕ್ಯ" ದಲ್ಲಿ ಒಟ್ಟು 5000 ಆಸನಗಳ ಬಗೆಗೆ ತಿಳಿಸಿದ ಮೊಟ್ಟ ಮೊದಲ ವ್ಯಕ್ತಿ ಶ್ರೀ ಯಾಜ್ಞವಲ್ಕ್ಯ ಎಂದು ತಿಳಿಸಿದರು. ಹಾಗೆಯೇ ಉತ್ತರಾರಾಧನೆಯಲ್ಲಿ ಸಭಿಕರೊಂದಿಗಿನ ಪ್ರಶ್ನೋತ್ತರ ಕಾರ್ಯಕ್ರಮವು ಸಹ ಅಷ್ಟೇ ವೈಶಿಷ್ಟ್ಯ ಪೂರ್ಣವಾಗಿತ್ತು.

ಇದೇ ತರಹ ಮಾಧವತೀರ್ಥರ 203ನೇಯ ಆರಾಧನಾ ಪಂಚರಾತ್ರೋತ್ಸವವನ್ನು ದಿನಾಂಕ: 12.04.2013 ರಿಂದ 16.04.2013 ರ ವರೆಗೆ ಸುಕ್ಷೇತ್ರ ಬುದ್ದಿನ್ನಿಯಲ್ಲಿ ಶ್ರೀಪಾದರು ತಾವೇ ಆರಾಧನೆಯ ಸಾರಥ್ಯ ವಹಿಸಿ ಕರ್ಮಾಚರಣೆಯೊಂದಿಗೆ ಜ್ಞಾನವನ್ನು ಬೆಳೆಸಿಕೊಳ್ಳಿ ಎಂಬ ಸಂದೇಶ ಬಿಂಬಿಸುವ ಕಾರ್ಯಕ್ರಮಗಳನ್ನು ಮಾಡಿದರು. ಆರಾಧನಾ ಆಹ್ವಾನ ಪತ್ರಿಕೆಯಲ್ಲಿ ಮುದ್ರಿತವಾದ ಅಕ್ಷರ ಕುಸುಮಗಳನ್ನು ನೋಡಿದರೆ, ಅವರ ಜ್ಞಾನ ಹಾಗೂ ಉತ್ಸಾಹಕ್ಕೆ ಎಣೆಯೇ ಇಲ್ಲವೆಂಬಂತ್ತಿತ್ತು. ಈ ಆರಾಧನೆಗೆ ಕಾಶಿ, ಓಡಿಸ್ಸಾ, ತಮಿಳುನಾಡು, ಆಂಧ್ರಪ್ರದೇಶ, ಗೌಹಾತಿ ಯಿಂದ ಶುಕ್ಲ ಯಜುರ್ವೇದೀಯ ಘನ ಪಂಡಿತರನ್ನು ಕರೆಯಿಸಿ ಅವರಿಂದ ಉಪನ್ಯಾಸ ಕಾರ್ಯಕ್ರಮವನ್ನಿಟ್ಟುಕೊಂಡು "ಹಯಗ್ರೀವ ಜ್ಞಾನ ಯಜ್ಞ"ವನ್ನು ಮಾಡಿ ಗುರುಗಳಿಗೆ ಸಮರ್ಪಿಸಿದ್ದರು.

ಕ್ರಿ.ಶ.1926 ರಲ್ಲಿ ಸ್ಥಾಪನೆಗೊಂಡು, 1927 ರಲ್ಲಿ ಆರಂಭವಾದ ಮಹಾ ಅಧಿವೇಶನ ಮುಂದೆ 1958 ರಲ್ಲಿ ನೋಂದಣಿ ಮಾಡಿಕೊಂಡ "ಅಖಿಲ ಭಾರತ ಕಣ್ವ ಪರಿಷತ"ನ ಆಡಳಿತ ಮಂಡಳಿಯುವರಿಗೆ ಸಲಹೆ ಸೂಚನೆಗಳಿತ್ತು, ಪ್ರೋತ್ಸಾಹಿಸುತ್ತಿದ್ದರು. ಪರಿಷತ್‌ನಿಂದ ಬಿಡುಗಡೆಯಾಗುತ್ತಿದ್ದ ಕಣ್ವ ವಿಕಾಸ ಮಾಸ ಪತ್ರಿಕೆಗೂ ಲೇಖನಗಳನ್ನು ಬರೆಯುತ್ತಿದ್ದರು. ಕ್ರಿ.ಶ.2004 ರಲ್ಲಿ ವಿಜಯಪುರದಲ್ಲಿ ಪರಿಷತ್‌ನ 14ನೇ ಮಹಾ ಅಧಿವೇಶನವನ್ನು ಶ್ರೀಪಾದರೇ ಮುತುವರ್ಜಿ ವಹಿಸಿ, ಅವರ ಮುಂದಾಳತ್ವದಲ್ಲೇ "ನ ಭೂತೋ ನ ಭವಿಷ್ಯತಿ" ಎಂಬಂತೆ

ಕಾರ್ಯಕ್ರಮವನ್ನು ಜರುಗಿಸಿದರು. ಈ ಕಾರ್ಯಕ್ರಮಕ್ಕೆ ಶ್ರೀ ಪೇಜಾವರ ಶ್ರೀಗಳನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿದ್ದರು.

ಇವರು ಭಾಗವತ ಪ್ರಿಯರು, ಹಾಗಾಗಿ ಶ್ರೀ ವೇ॥ಮೂ॥ ಸಂಸ್ಕೃತ ಪಂಡಿತರಾದ ಶ್ರೀ ರಾಜೇಂದ್ರಾಚಾರ್ಯ ಜೋಶಿ, ಶಹಾಬಾದ ಹಾಗೂ ಶ್ರೀ ವೇ॥ಮೂ॥ ಉಡುಪಿ ಕೃಷ್ಣಾಚಾರ್ಯ ಕನಸಾವಿ ಸೋಲಾಪುರ ಈ ಆಚಾರ್ಯದ್ವಯರನ್ನು ಶ್ರೀಮಠಕ್ಕೆ ಕರೆಯಿಸಿಕೊಂಡು ಕುಮಾರವ್ಯಾಸ ಭಾರತ, ಭಾಗವತ ಹಾಗೂ ಯಾಜ್ಞವಲ್ಕ್ಯ ಸ್ಮೃತಿಯನ್ನು ಶ್ರವಣ ಮಾಡುತ್ತಿದ್ದರಂತೆ. ಅವರ ನಡುವಿನ ಚರ್ಚೆಗಳು ಮಧ್ಯರಾತ್ರಿಯ ಪ್ರಹರದವರೆಗೂ ಮುಂದುವರೆಯುತ್ತಿದ್ದವೆಂದು ಜೋಶಿ ಆಚಾರ್ಯರು ಶಹಾಬಾದ ನೆನಪಿಸಿಕೊಂಡು ಭಾವುಕರಾಗುತ್ತಾರೆ.

ಯತ್ಯಾಶ್ರಮ ತೆಗೆದುಕೊಳ್ಳುವ ಒಂದು ವರ್ಷ ಮೊದಲು (1992) ತೆರೆದ ಹೃದಯ ಹಾಗೂ ಆಶ್ರಮ ವಹಿಸಿದ 10 ವರ್ಷಗಳ ನಂತರ 2ನೇಯ ಸಲವು ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಈ ಬಗೆಯ ಕಾರ್ಯಚಟುವಟಿಕೆಗಳನ್ನು ನಡೆಸಿ, ಉತ್ತಮ ಆರೋಗ್ಯ ಕಾಪಾಡಿಕೊಂಡಿದ್ದರ ಗುಟ್ಟೆಂದರೆ ಯೋಗ. ಶ್ರೀಪಾದರು ಉತ್ತಮ ಯೋಗಪಟುವಾಗಿದ್ದರು.

ಇವರ ಕೆಲಸ ಕಾರ್ಯಗಳನ್ನು ಮೆಚ್ಚಿಕೊಂಡು ಗೌರವಿಸಿದವರಲ್ಲಿ ಮೊದಲಿಗರಾದವರು ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರು. ಅಂತೆಯೇ ತಾವು ಹರಿದ್ವಾರದಲ್ಲಿ ನಿರ್ಮಿಸಿದ ಮಧ್ವ ಮಹಾ ಮಂಟಪಕ್ಕೆ ಶಿಲಾನ್ಯಾಸವನ್ನು "ಶ್ರೀ ವಿದ್ಯಾಭಾಸ್ಕರ ತೀರ್ಥ"ರ ಅಮೃತ ಹಸ್ತದಿಂದ ಮಾಡಿಸಿದ್ದರು. ಹಾಗೂ ಶಿಲಾನ್ಯಾಸದಲ್ಲಿ "ಶ್ರೀ ವಿದ್ಯಾಭಾಸ್ಕರತೀರ್ಥರು, ಕಣ್ವಮಠ" ಎಂದು ಬರೆಯಿಸಿ ತಮಗೂ ಕಣ್ವ ಮಠಕ್ಕೂ ಇರುವ ಅನ್ಯೋನ್ಯತೆಯನ್ನು ಬಿಂಬಿಸಿದರು. ಹಾಗೂ ನಮ್ಮ ಶ್ರೀಪಾದರ ಸಮ್ಮುಖದಲ್ಲಿಯೇ ಉಡುಪಿ ಕೃಷ್ಣ ಮಠದಲ್ಲಿ ಶ್ರೀ ಯಾಜ್ಞವಲ್ಕ್ಯರ ಜಯಂತಿಯನ್ನು ಕಾರ್ತಿಕ ಶುದ್ಧ ಸಪ್ತಮಿಯಂದು ಆಚರಿಸಲು ಪ್ರಾರಂಭ ಮಾಡಿದರು.

ಶ್ರೀ ರಾಘವೇಂದ್ರ ಸ್ವಾಮಿ ಮಠದ ಶ್ರೀ ಸುಶುಮಿಂದ್ರ ತೀರ್ಥ ಶ್ರೀಪಾದರು ನಮ್ಮ ಶ್ರೀಪಾದರ 85ನೇ ವರ್ಧಂತಿ ಉತ್ಸವವನ್ನು ದಿನಾಂಕ: 12.02.2010 ರಿಂದ 19.02.2010 ರ ವರೆಗೆ ಶ್ರೀ ರಾಘವೇಂದ್ರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಅದ್ದೂರಿಯಿಂದ ಆಚರಿಸಿಸಲು ಅನುವು ಮಾಡಿಕೊಟ್ಟರು. ದಿನಾಂಕ: 19 ರಂದು ಶ್ರೀಪಾದರ ತುಲಾಭಾರವನ್ನು ಮಾಡಿ ಗೌರವವನ್ನು ಸಮರ್ಪಿಸಿ ರಾಯರ ಮಠ ಹಾಗೂ ಕಣ್ವ ಮಠದ ಸಂಬಂಧವನ್ನು ಗಟ್ಟಿ ಮಾಡಿದರು. ಹಾಗೆಯೇ ಶ್ರೀಪಾದರ 85ನೇಯ ವರ್ಧಂತಿ ಉತ್ಸವವನ್ನು ಸಿಂಧನೂರಿನ ನಾಗರಿಕ ಸೇವಾ ಸಮಿತಿಯವರು ಆಚರಿಸಿದರು. ಸಂಧ್ಯಾಕಾಲದಲ್ಲಿ ಶ್ರೀಪಾದರನ್ನು ನಗರದ ಪ್ರವಾಸಿ ಮಂದಿರದಿಂದ ಶ್ರೀರಾಮಚಂದ್ರ ದೇವಸ್ಥಾನದವರೆಗೆ ಭವ್ಯ ಮೆರವಣಿಗೆಯೊಂದಿಗೆ ಸ್ವಾಗತ ಕೋರಲಾಯಿತು. ಮರುದಿನ ಮಧ್ವ ನವಮಿಯಂದು ನಗರದ ಸಮಿತಿ ವತಿಯಿಂದ ತುಲಾಭಾರ ಹಾಗೂ ನಾಗರಿಕ ಸನ್ಮಾನವನ್ನು ಮಾಡಿ ಗೌರವಿಸಿದರು. ನಂತರ ಸಿಂಧನೂರಿನ ಭಕ್ತರು ಫಲಮಂತ್ರಾಕ್ಷತೆ ಪಡೆದು ಪುನೀತರಾದರು.

ಶ್ರೀಪಾದರು ದಕ್ಷಿಣ ಭಾರತದ ರಾಜಮಂಡ್ರಿ, ವಿಶಾಖಪಟ್ಟಣ ದಿಗ್ವಿಜಯ ಕೈಗೊಂಡಾಗ ಅಲ್ಲಿಯ ಶಿಷ್ಯಂದಿರನ್ನುದ್ದೇಶಿಸಿ ತೆಲಗು ಭಾಷೆಯಲ್ಲಿ ನಿರ್ಗಳವಾಗಿ ಪ್ರವಚನವನ್ನು ಮಾಡಿದಾಗ, ಆಂಧ್ರದ ಘನಪಾಟಿಗಳು ಇವರ ಪಾಂಡಿತ್ಯಕ್ಕೆ ಮರುಳಾಗಿ "ಅಭಿನವ ಯಾಜ್ಞವಲ್ಕ್ಯ" ಬಿರುದನ್ನು ದಯಪಾಲಿಸಿ ಕೊಂಡಾಡಿದರು.

ಶ್ರೀಪಾದರು ಭಾಗವತವನ್ನು ಸತತ ಅಧ್ಯಯನಗೈಯುತ್ತಿದ್ದರು. ಅಂತೆಯೇ ಅಲ್ಲಿರುವ ಸೂಕ್ಷ್ಮ ವಿಷಯುಗಳನ್ನು ಉಪಯುಕ್ತ ಮಂತ್ರಗಳ ಬಗೆಗೆ ತಿಳಿದುಕೊಂಡಿದ್ದರು. ಅಂತೆಯೇ ಭಾಗವತದಲ್ಲಿ ಷಷ್ಠವು ಸ್ಕಂದ ಅಷ್ಟಮೋಧ್ಯಾಯದಲ್ಲಿ ಬರುವ 'ನಾರಾಯಣ ವರ್ಮ'ದ ಮಹತ್ವವನ್ನು ಅರಿತು ವಾದಿರಾಜರು ಬರೆದಂತಹ ಕನ್ನಡದ ನಾರಾಯಣವರ್ಮನ ಪ್ರತಿಗಳನ್ನು ಜಿರಾಕ್ಸ್ ಮಾಡಿ ಹಂಚಿದ್ದರು. ಆ ಮಂತ್ರದ ಪಠಣೆಯಿಂದ ಸರ್ವಕಾಲಗಳಲ್ಲೂ ಭಗವಂತನಿಂದ ರಕ್ಷಣೆ ಪಡೆಯಬಹುದು ಎಂದು ಮಂತ್ರೋಪದೇಶ ಮಾಡಿದ್ದರು. ಹಾಗೂ ಪಂಚಮ ವೇದವೆಂದೇ ಪ್ರಸಿದ್ಧಿ ಪಡೆದ ಮಹಾಭಾರತದಲ್ಲಿ ಬರುವ "ವಿಷ್ಣು ಸಹಸ್ರನಾಮ" ಪಠಣೆಯಿಂದ ಸರ್ವ ಸಂಕಷ್ಟಗಳನ್ನು ಪರಿಹರಿಸಿಕೊಳ್ಳಬಹುದೆಂದು ಮಂತ್ರೋಪದೇಶ ಮಾಡಿದ್ದರು.ಹೀಗೆ ವಿಪ್ರರಿಗೆ ಮಂತ್ರಗಳೇ ರಕ್ಷಾ ಕವಚಗಳು, ಮಂತ್ರಗಳ ಮಹಿಮೆಯನ್ನು ಅರಿತುಕೊಂಡು, ನಿರಂತರ ಪಠಣೆಯಿಂದ ಅವುಗಳನ್ನು ಸಿದ್ಧಿಪಡಿಸಿಕೊಂಡು, ಸಂಕಷ್ಟಗಳಿಂದ ಮುಕ್ತರಾಗಿ ಎಂದು ಬೋಧನೆ ಮಾಡುತ್ತಿದ್ದರು.

"ಫಲವಿದು ಬಾಳ್ದುದಕೆ ಸಿರಿನಿಲಯನ ಗುಣಗಳ ತಿಳಿದು ಭಜಿಸುವುದೆ" ಎಂದು ದಾಸ ನುಡಿಮುತ್ತಿಗೆ ಬದ್ಧರಾಗಿ ಯತ್ಯಾಶ್ರಮವನ್ನು ತೆಗೆದುಕೊಂಡಾಗಿನಿಂದ ಒಂದು ಕ್ಷಣವೂ ಶಾಂತವಾಗಿ ವಿರಮಿಸದೆ ಸತತ ಚಿಂತನ-ಮಂಥನದೊಂದಿಗೆ ನಿರಂತರ ಶ್ರೀ ವಿಠ್ಠಲಕೃಷ್ಣನ ಭಕ್ತರ ಸೇವೆಗೈದರು. ಗಂಧದ ಕೊರಡು ತಾನು ಸವೆದುಕೊಂಡು ಸುಗಂಧ ಬೀರುವಂತೆ ಶ್ರೀಪಾದರು ತಾವು ಕಷ್ಟಗಳನ್ನು ಎದುರಿಸಿ ನಮಗೆ ಕಣ್ವಾಭಿಮಾನದ, ಆತ್ಮಗೌರವದ ಸುಗಂಧದ ಪರಿಮಳ ಬೀರಿದರು. ತಮಗೆ ಸ್ವರ್ಗ ಮೋಕ್ಷಾದಿಗಳ ಬಯಕೆಯಿಲ್ಲ, ಮಾನವ ಜನ್ಮವಿದ್ದರೆ, ಅದು ಕಾಣ್ವನಾಗಿಯೇ ಹುಟ್ಟಿಬಂದು ಕಣ್ವರ ಸೇವೆ ಮಾಡಬೇಕು ಎಂದು ಶ್ರೀ ಯಾಜ್ಞವಲ್ಕ್ಯ ಗುರುಗಳ ಪಾದ ಪದ್ಮಗಳಿಗೆ ತಮ್ಮ ಬಯಕೆಯನ್ನಿಟ್ಟು (ಕೊಪ್ಪಳದ ವೇ. ಮೂ. ಶ್ರೀಕೋಪ್ರೇಶಾ ಚಾರ್ಯರಿಗೆ ಕಾಯಿಕೊಟ್ಟು 'ಶ್ರೀವಿದ್ಯಾವಾರಿಧಿತೀರ್ಥ' ಎಂಬ ನಾಮಾಭಿದಾನವನ್ನು ನೀಡಿ) ದಿನಾಂಕ: 12.06.2015 ಶಾಲಿವಾನ ಶಕೆ (1937) ಮನ್ಮಥನಾಮ ಸಂವತ್ಸರದ ಜೇಷ್ಠ ಬಹುಳ ಏಕಾದಶಿ ದಿನದಂದು ಹರಿಪಾದ ಸೇರಿದರು. ಇವರ ವೃಂದಾವನವು ಶ್ರೀ ಕ್ಷೇತ್ರ ಹುಣಸಿಹೊಳೆಯಲ್ಲಿ ಕಣ್ವತೀರ್ಥದ ತಟದಲ್ಲಿ ಪಂಚ ವೃಂದಾವನಗಳ ವೃಂದದೊಳಗೆ ರಾರಾಜಿಸುತ್ತಿದೆ. ಬೇಡಿ ಬಂದ ಭಕ್ತರ ಅಭಿಷ್ಟೆಗಳನ್ನು ಪೂರೈಸುತ್ತ ವರದ ಹಸ್ತ ನೀಡಿ ಹರಸುತ್ತಿದ್ದಾರೆ.

ಶ್ರೀವಿದ್ಯಾವಾರಿಧಿತೀರ್ಥರು ಕಾರಣಾಂತರಗಳಿಂದ ಪೀಠತ್ಯಾಗ ಮಾಡಿದರು, ನಂತರ ಬೆಂಗಳೂರಿನ ಶ್ರೀರವೀಂದ್ರಾಚಾರ್ಯ ಇವರು ಅಶ್ವೀಜಮಾಸ ಕೃಷ್ಣಪಕ್ಷ ಪಂಚಮಿ (18-10-2019) ರಂದು "ಶ್ರೀವಿದ್ಯಾಕಣ್ವವಿರಾಜತೀರ್ಥ" ಎಂಬ ನಾಮದಿಂದ ಶ್ರೀ ಕಣ್ವಮಠದ ಪೀಠಾರೋಹಣ ಮಾಡಿದರು.

**"ನೋಡಲೆ ಮನವೆ ಕೊಂಡಾಡು ಗುರುಗಳ ಪಾದ ಈಡಿಲ್ಲವೋ ಪುಣ್ಯಕೆ!"**

ಶ್ರೀ ಚಿದಂಬರ ವಿಠ್ಠಲಕೃಷ್ಣಾರ್ಪಣಮಸ್ತು

**ಗ್ರಂಥ ಋಣ:**

'ಶುಕ್ಲಯಜುರ್ವೇದಿ ಮಹಾತ್ಮರು',
ಶ್ರೀಪಾದರ ಸಂದೇಶ
ಸಾಧಕರೊಂದಿಗೆ ಸಮಾಲೋಚನೆ
ವೇದಶಾಖಿಯರಲ್ಲಿ ತಾರತಮ್ಯ ಮಾಡುವ ಕುಜನರ ಮೋಕ್ಷ ಸಾಧನೆಗಾಗಿ
ಶಾಸ್ತ್ರೀಯ ಸಮೀಕ್ಷೆ
ಆಹ್ವಾನ ಪತ್ರಿಕೆಗಳು, ಭಿತ್ತಿ ಪತ್ರಗಳು

**ಮಹನೀಯರು:**

ವೇ॥ ಮೂ॥ ಪಂ. ಶ್ರೀ ಭೀಮಪ್ಪಯ್ಯ ದೇವರು.
ವೇ॥ ಮೂ॥ ಶ್ರೀ ರಾಜೇಂದ್ರ ಆಚಾರ್ಯ ಜೋಶಿ.
ಶ್ರೀಯುತ ಮೋಹನ ದೇವರು.
ಶ್ರೀಯುತ ಶ್ರೀಹರಿ ಆಧೋನಿ.
ಶ್ರೀಯುತ ಗುರುರಾಜರಾವ ಕುಲಕರ್ಣಿ ಗೋನವಾರ್.
ಶ್ರೀಯುತ ಸುರೇಶ ಕುಲಕರ್ಣಿ, ಹುಣಸಿಹೊಳೆ.
ಶ್ರೀಯುತ ಕಿಶನರಾವ ವ್ಯಾಕರನಾಳ
ಶ್ರೀಮತಿ ಪೂರ್ಣಿಮಾ ದೇವರು.
ಚಿ॥ ಭಾರತೀಶ ಮೋತಕಪಲ್ಲಿ.

ಲೇಖಕರು : **ಸಂಗೀತಾ ರಾಘವೇಂದ್ರ. ಜಿ. ವಕೀಲ ಜೇವರ್ಗಿ,**

ಕಲಬುರಗಿ

ಫೋ.ನಂ : 9449693072

* * *